# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:02 • ಸಂಚಿಕೆ:05 • ನೋಂದಣಿ ನಂ.:KARKAN27911 • ವಿಜಯನಗರ • 26.06.2024 • ಬುಧವಾರ • ಪುಟ:04 • ಬೆಲೆ:2
Volume:02 • Issue:05 • Reg.No:KARKAN27911 • VIJAYANAGARA • 26.06.2024 • Wednesday • Page:04 • Rs:2




ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

70,000

HAMPI TIMES E-PAPER READERS

94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201


**ಮೈಕ್ರೋ ನ್ಯೂಸ್**

## ವಸತಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

2024-25ನೇ ಸಾಲಿಗಾಗಿ ಗಂಗಾವತಿ, ಕನಕಗಿರಿ ಹಾಗೂ ಕಾರಟಗಿ ತಾಲ್ಲೂಕಾ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಬಾಲಕರ/ಬಾಲಕಿಯರ ವಸತಿ ನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ವಸತಿ ನಿಲಯಗಳಾದ ಗಂಗಾವತಿ, ಕನಕಗಿರಿ, ಮುಸಲಾಪುರ, ನವಲಿ ಹಾಗೂ ಕಾರಟಗಿಯ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ಗಂಗಾವತಿ ಹಾಗೂ ಕನಕಗಿರಿಯ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಮೆಟ್ರಿಕ್ ನಂತರದ ವಸತಿ ನಿಲಯಗಳಾದ ಗಂಗಾವತಿ ಹಾಗೂ ಕನಕಗಿರಿಯ ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ ಮತ್ತು ಗಂಗಾವತಿಯ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳ ಪ್ರವೇಶಕ್ಕೆ ಅರ್ಹ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ ತಿತಿತಿ.ತಿ.ಇಚಿಡಿ.ಟಿಛಿ.ಟಿ ಮೂಲಕ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಿದ ನಂತರ ಅರ್ಜಿ ಪ್ರತಿಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಹಿಂದಿನ ತರಗತಿಯ ಅಂಕಪಟ್ಟಿಯ ದೃಢೀಕೃತ ಜರಾಕ್ಸ್ ಪ್ರತಿಗಳು, ವಿದ್ಯಾರ್ಥಿ ಹಾಗೂ ಪೋಷಕರ ಆಧಾರ್ ಕಾರ್ಡ್ ಪ್ರತಿಗಳು ಮತ್ತು ವಿದ್ಯಾರ್ಥಿಯ ಪಾಸ್‌ಪೋರ್ಟ್ ಅಳತೆಯ 04 ಭಾವಚಿತ್ರಗಳೊಂದಿಗೆ ಸಹಾಯಕ ನಿರ್ದೇಶಕರು ಗ್ರೇಡ್-1, ಸಮಾಜ ಕಲ್ಯಾಣ ಇಲಾಖೆ, ಗಂಗಾವತಿ ಕಾರ್ಯಾಲಯಕ್ಕೆ ಸಲ್ಲಿಸಬೇಕು ಎಂದು ಇಲಾಖೆಯ ಸಹಾಯಕ ನಿರ್ದೇಶಕರು (ಗ್ರೇಡ್-1) ತಿಳಿಸಿದ್ದಾರೆ.

## ವಾಂತಿ ಭೇದಿ ಪ್ರಕರಣ ಮುಂಜಾಗ್ರತ ಕ್ರಮ ಅನುಸರಿಸಿ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚು ವಾಂತಿ ಭೇದಿ ಪ್ರಕರಣಗಳು ದಾಖಲಾಗುತ್ತಿದ್ದು, ಸಾರ್ವಜನಿಕರು ಇದರ ಬಗ್ಗೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು ಎಂದು ಡಿಸಿ ನಲಿನ್ ಅತುಲ್ ತಿಳಿಸಿದ್ದಾರೆ.

ಮಳೆಗಾಲ ಆರಂಭವಾಗಿರುವುದರಿಂದ ಕಲುಷಿತ ನೀರು ಶುದ್ಧ ಕುಡಿಯುವ ನೀರಿನೊಂದಿಗೆ ಬೆರೆತು ಅಥವಾ ಪೈಪ್ ಲೈನ್‌ಗಳಲ್ಲಿ ಬೆರೆತು ಕುಡಿಯುವ ನೀರಿನ ಮಾಲಿನ್ಯವಾಗುವ ಸಾಧ್ಯತೆ ಇರುತ್ತದೆ. ವಾಂತಿ ಬೇಧಿ ಮುಂತಾದ ಖಾಯಿಲೆಗಳು ಬರುವ ಸಾಧ್ಯತೆ ಇದ್ದು, ಸಾರ್ವಜನಿಕರು ಆರೋಗ್ಯವನ್ನು ಕಾಪಾಡಿಕೊಳ್ಳಲು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಪಾಲಿಸಬೇಕು.

# ಎಚ್ಚೆತ್ತ ನಗರಸಭೆ, ವಾಹನ ಸವಾರರು ನಿರಾಳ

## ವರದಿ ನಂತರ ಬಸವಣ್ಣ ಕಾಲುವೆ ಪಕ್ಕದ ಹಳೇಅಮರಾವತಿ ಸಿಸಿ ರಸ್ತೆ ದುರಸ್ತಿ

**ಹಂಪಿ ಟೈಮ್ಸ್ ಹೊಸಪೇಟೆ**

HAMPI TIMES IMPACT

ನಗರದ ನಾಗಪ್ಪ ಕಟ್ಟೆಯಿಂದ ಹಳೇ ಅಮರಾವತಿಗೆ ಹೋಗುವ ಬಸವಣ್ಣ ಕಾಲುವೆ ಪಕ್ಕದ ಸಿಸಿ ರಸ್ತೆಯನ್ನು ಯುಜಿಡಿಗಾಗಿ ಅಗೆದು ಮೂರು ತಿಂಗಳಾದರೂ ದುರಸ್ತಿ ಮಾಡದೇ ನಗರಸಭೆ ಅಧಿಕಾರಿಗಳು ಮರೆತಿದ್ದರು.

"ಸಿಸಿ ರಸ್ತೆ ಅಗೆದು ಮರೆತ **ನಗರಸಭೆ! ಕತ್ತಲಲ್ಲ ಕಾಲುವೆ ಬಿದ್ದರೆ ಯಾರು ಹೊಣೆ?**" ಶೀರ್ಷಿಕೆಯಡಿ ಹಂಪಿ ಟೈಮ್ಸ್ ಭಾನುವಾರ ವರದಿ ಪ್ರಟಿಸಿದ ಬೆನ್ನಲ್ಲೆ, ಎಚ್ಚೆತ್ತುಕೊಂಡ ನಗರಸಭೆ ಅಧಿಕಾರಿಗಳು ಸೋಮವಾರ ನಡುರಸ್ತೆಯಲ್ಲೆ ಗೋಪುರದಂತಿದ್ದ ಸಿಸಿ ತುಂಡುಗಳನ್ನು ನೆಲಸಮಗೊಳಿಸಿ, ಮಂಗಳವಾರ ಮೊದಲಿನಂತೆ ಕಾಂಕ್ರಿಟ್ ಹಾಕಿ, ರಸ್ತೆಯನ್ನು ಯಥಾಸ್ಥಿತಿಗೆ ತಂದು, ವಾಹನಗಳ ಸುಗಮ ಸಂಚಾರಕ್ಕೆ ಅವಕಾಶ ಮಾಡಿದ್ದಾರೆ. ವಾಹನ ಸವಾರರಲ್ಲಿ ಆತಂಕ ದೂರಾಗಿಸಿರುವುದಕ್ಕೆ ವಾಹನ ಸವಾರರು, ನಗರಸಭೆ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಧನ್ಯವಾದ ತಿಳಿಸಿದ್ದಾರೆ.




ಹಂಪಿ ಟೈಮ್ಸ್

**ಸಿಸಿ ರಸ್ತೆ ಅಗೆದು ಮರೆತ ನಗರಸಭೆ! ಕತ್ತಲಲ್ಲಿ ಕಾಲುವೆಗೆ ಬಿದ್ದರೆ ಯಾರು ಹೊಣೆ?**

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಅಭಿವೃದ್ಧಿ ಕಾಮಗಾರಿಗಳ ನೆಪದಲ್ಲಿ ಸಿಸಿ ರಸ್ತೆ ಅಗೆಯಲಾಗಿದೆ. ಆದರೆ ನಿತ್ಯ ವಾಹನ ಸಂಚಾರವಿರುವ ರಸ್ತೆಗಳನ್ನು ಅಗೆದು ಮೂರು ತಿಂಗಳಾದರೂ ಕಾಮಗಾರಿ ಪೂರ್ಣಗೊಳಿಸದೆ, ಅಗೆದ ರಸ್ತೆಯನ್ನು ಸಮಗೊಳಿಸದೇ ಹಾಗೇ ಬಿಟ್ಟು ವಾಹನ ಸವಾರರ ಜೀವದ ಜೊತೆ ಚೆಲ್ಲಾಟವಾಡುತ್ತಿದೆಯಾ ನಗರಸಭೆ ಎಂದು ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಈ ರಸ್ತೆಯಲ್ಲಿ ನಿತ್ಯ ರೈತರು ತಮ್ಮ ಕೃಷಿ ಕಾರ್ಯಗಳಿಗೆ ತೆರಳುತ್ತಾರೆ. ಹಳೆ ಅಮರಾವತಿ ಪ್ರದೇಶ, ಟಿ.ಬಿ.ಡ್ಯಾಂ ಜನರು ಇದೇ ರಸ್ತೆಯನ್ನು ಅವಲಂಬಿಸಿದ್ದಾರೆ. ನಾಲ್ಕು ಚಕ್ರದ ವಾಹನಗಳು ಓಡಾಡದಂತಾಗಿದೆ. ರಾತ್ರಿ ವೇಳೆ ಬೀದಿ ದೀಪಗಳು ಇಲ್ಲದ್ದರಿಂದ ವಾಹನ ಸವಾರರು ಬ್ಯಾಲೆನ್ಸ್ ತಪ್ಪುತ್ತಿದ್ದಾರೆ. ಈಗಾಗಲೇ ಕೆಲವರು ಬಿದ್ದು ಅಡಲಿತ ವ್ಯವಸ್ಥೆಯನ್ನು ಶಪಿಸಿದರೆ, ನಾಲ್ಕು ಚಕ್ರದ ವಾಹನಗಳ ಸವಾರರು ಈ ರಸ್ತೆ ಸಂಚಾರವನ್ನು ತ್ಯಜಿಸುವಂತಾಗಿದೆ. ವಾಹನ ಸವಾರರು, ಕೃಷಿ ಚಟುವಟಿಕೆಗಳಿಗೆ ತೆರಳುವ ಎತ್ತಿನ ಬಂಡಿ, ಶಾಲೆಗಳಿಗೆ ಮಕ್ಕಳನ್ನು ಕರೆದೊಯ್ಯುವ ಆಟೋಗಳು ಇದೇ ಮಾರ್ಗದಲ್ಲಿ ಸಂಚರಿಸುತ್ತಿದ್ದು, ಅವಘಡಗಳು ಸಂಭವಿಸುವುದಕ್ಕಿಂತ ಮುನ್ನ ರಸ್ತೆ ದುರಸ್ಥಿಗೊಳಿಸಬೇಕೆಂದು ವಾಹನ ಸವಾರರು ಒತ್ತಾಯಿಸಿದ್ದಾರೆ.

ನಗರಸಭೆ ಅಧ್ಯಕ್ಷರು ಪತ್ರಿಕೆಗೆ ಪ್ರತಿಕ್ರಿಯಿಸಿ, ಯುಜಿಸಿ ಕಾಮಗಾರಿಗಾಗಿ ಅಗೆಯಲಾಗಿತ್ತು, ಲೆವೆಲ್ಲಿಂಗ್ ಸಿಗಲಿಲ್ಲ. ದುರಸ್ತಿಗೆ ತಡವಾಗಿದೆ. ಸೋಮವಾರ ದುರಸ್ತಿ ಮಾಡಿಸಲಾಗುವುದು ಎಂದು ನಗರಸಭೆ ಅಧ್ಯಕ್ಷರು ತಿಳಿಸಿದ್ದಾರೆ. ದುರಸ್ತಿಯಾಗುವುದೇ ಕಾದು ನೋಡಬೇಕಿದೆ.

23 Jun 2024 - Page 1-powerd by webgauge

# ಹೂವಿನಹಡಗಲಿ ಜನರಿಂದ ಡಿಸಿಗೆ ನೂರೊಂದು ಅಹವಾಲು ಸಲ್ಲಿಕೆ

## ಶಾಸಕ ಕೃಷ್ಣನಾಯ್ಕ, ಡಿಸಿ ಎಂ.ಎಸ್.ದಿವಾಕರ, ಜಿಪಂ ಸಿಇಒ ಬಿ.ಸದಾಶಿವ ಪ್ರಭು ಜನರಿಗೆ ಸ್ಪಂದನೆ

**ಹಂಪಿ ಟೈಮ್ಸ್ ಹೂವಿನಹಡಗಲಿ**

ಜೂನ್ ಮತ್ತು ಜುಲೈ ಮಾಹೆಯಲ್ಲಿ ನಿಗದಿಯಾದ ಜನತಾ ದರ್ಶನದ ಮೊದಲ ಕಾರ್ಯಕ್ರಮ ಹೂವಿನಹಡಗಲಿಯಲ್ಲಿ ಮಂಗಳವಾರ ನಡೆಯಿತು.

ರಾಜ್ಯ ಸರ್ಕಾರದ ನಿರ್ದೇಶನದಂತೆ ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದ ಸಮಾರಂಭದಲ್ಲಿ, ಶಾಸಕರಾದ ಕೃಷ್ಣ ನಾಯ್ಕ ಅವರ ಸಮ್ಮುಖದಲ್ಲಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಸಾರ್ವಜನಿಕರ ಅಹವಾಲು ಆಲಿಸಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್‌ನಿಂದ ನಡೆದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸದಾಶಿವ ಪ್ರಭು ಬಿ., ಸಹಾಯಕ ಆಯುಕ್ತರಾದ ಚಿದಾನಂದ ಗುರುಸ್ವಾಮಿ, ತಹಸೀಲ್ದಾರರಾದ ಅಮರೇಶ ಮತ್ತು ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಉಮೇಶ ಅವರು ಜಿಲ್ಲಾಧಿಕಾರಿಗಳ ಜೊತೆಗೆ ಅರ್ಜಿಗಳನ್ನು ಪರಿಶೀಲಿಸಿದರು.

ಅಬಕಾರಿ ಉಪ ಆಯುಕ್ತರಾದ ಸಿ.ಕೆ. ಮಹೇಂದ್ರ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ಎಸ್., ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ರಾಮಚಂದ್ರಪ್ಪ, ಆಹಾರ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಿಕಾರ್ಜುನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಶ್ವೇತಾ, ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರಾದ ಸೋಮಸಿಂಗ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಗುಡ್ಡಪ್ಪ, ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದು ಜಿಲ್ಲಾಧಿಕಾರಿಗಳ ಸೂಚನೆಯಂತೆ ಅರ್ಜಿಗಳ ಬಗ್ಗೆ ಸ್ಥಳದಲ್ಲಿಯೇ ಪರಿಶೀಲಿಸಿ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದರು.

**ಅರ್ಜಿ ಸ್ವೀಕೃತಿಗೆ ವ್ಯವಸ್ಥೆ:** ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಜನತಾ ದರ್ಶನದಲ್ಲಿ ಸ್ವೀಕೃತಿಯಾಗುವ ಅರ್ಜಿಗಳ ಸ್ವೀಕೃತಿಗೆ ಎಲ್ಲಾ ಇಲಾಖೆಗಳಿಂದಲು ವ್ಯವಸ್ಥೆಯನ್ನು ಮಾಡಲಾಗಿತ್ತು. ಕೃಷಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಆಹಾರ ಇಲಾಖೆ, ಆರೋಗ್ಯ ಇಲಾಖೆ, ತೋಟಗಾರಿಕಾ ಇಲಾಖೆ, ಕೃಷಿ ವಿವಿ ರಾಯಚೂರಿನ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಹಡಗಲಿ, ಜೆಸ್ಕಾಂ ಉಪ ವಿಭಾಗ, ಪಂಚಾಯತ್ ರಾಜ್ಯ ಎಂಜಿನಿಯರಿಂಗ್ ಇಲಾಖೆ, ಲೋಕೋಪಯೋಗಿ ಇಲಾಖೆ, >>3





### 101 ಅರ್ಜಿಗಳ ಸಲ್ಲಿಕೆ

ಕಂದಾಯ ಇಲಾಖೆಗೆ 58, ತಾಲೂಕು ಪಂಚಾಯತ್‌ಗೆ 9, ಪುರಸಭೆಗೆ 7, ಭೂಮಾಪನ ಇಲಾಖೆಗೆ 4, ಸಾರಿಗೆ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜೆಸ್ಕಾಂ ಇಲಾಖೆಗೆ ಮತ್ತು ಸಣ್ಣ ನೀರಾವರಿ ಇಲಾಖೆಗೆ ತಲಾ 3., ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ 2, ಲೋಕೋಪಯೋಗಿ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ, ಕೃಷಿ ಇಲಾಖೆ ಹಾಗೂ ಪೊಲೀಸ್ ಇಲಾಖೆ ಮತ್ತು ಶಾಲಾ ಶಿಕ್ಷಣ ಇಲಾಖೆಗೆ ತಲಾ 1 ಅರ್ಜಿಗಳು ಸಲ್ಲಿಕೆಯಾದವು.

# ಜು.21 ಅಖಿಲ ಭಾರತ ವೀರಶೈವ ಮಹಾಸಭೆಯ ತಾಲೂಕು ಘಟಕಕ್ಕೆ ಚುನಾವಣೆ

## ಸ.ಚುನಾವಣಾಧಿಕಾರಿ ಚಂದ್ರಶೇಖರ ಶಾಸ್ತ್ರಿ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ಅಖಿಲ ಭಾರತ ವೀರಶೈವ ಮಹಾಸಭೆಯ ತಾಲೂಕು ಘಟಕದ ಚುನಾವಣೆ ಪ್ರಕ್ರಿಯೆಗಳು ನಗರದ ವೀ.ವಿ.ಸಂಘದ ಇಂಡಿಪೆಂಡೆಂಟ್ ಪಿಯು ಕಾಲೇಜ್‌ನಲ್ಲಿ ಜೂ.27 ರಿಂದ ಜು.21ವರೆಗೆ ನಡೆಯಲಿವೆ ಎಂದು ಹೊಸಪೇಟೆ ತಾಲೂಕು ಘಟಕದ ಸಹಾಯಕ ಚುನಾವಣಾಧಿಕಾರಿ ಡಾ.ಹೆಚ್.ಎಮ್.ಚಂದ್ರಶೇಖರ ಶಾಸ್ತ್ರಿ ತಿಳಿಸಿದರು.


ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ತಾಲೂಕು ಮಟ್ಟದಲ್ಲಿ ಜೂ.27, ಜಿಲ್ಲಾ ಮಟ್ಟದಲ್ಲಿ ಆ.1 ಮತ್ತು ರಾಜ್ಯ ಮಟ್ಟದ ಚುನಾವಣೆ ಸೆ.5 ರಂದು ಒಟ್ಟು ಮೂರು ಹಂತದಲ್ಲಿ ಚುನಾವಣೆ ನಡೆಯಲಿವೆ.

ಹೊಸಪೇಟೆ ತಾಲೂಕು ಘಟಕದ ಚುನಾವಣೆಗೆ ಜೂ.27 ರಿಂದು ಬೆಳಿಗ್ಗೆ 10.30ರಿಂದ ಜು.4 ಮಧ್ಯಾಹ್ನ 3 ವರೆಗೆ ನಾಮಪತ್ರ ಸ್ವೀಕರಿಸಲಾಗುತ್ತದೆ. ಜು.5 ರಂದು ನಾಮಪತ್ರ ಪರಿಶೀಲನೆ, ಜು.8 ರಂದು ನಾಮಪತ್ರ ಹಿಂಪಡೆಯಲು ಕೊನೆದಿನ. ಜು.21 ರಂದು ಭಾನುವಾರ ಬೆಳಿಗ್ಗೆ 8.00 ರಿಂದ ಸಂಜೆ 5.00ವರೆಗೆ ಮತದಾನ ನಂತರ ಮತಗಳ ಎಣಿಕೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ವೀ.ವಿ.ಸಂಘದ ಇಂಡಿಪೆಂಡೆಂಟ್ ಪಿಯು ಕಾಲೇಜ್‌ನಲ್ಲಿ ಸಂಪರ್ಕಿಸಬಹುದು ಎಂದು ತಿಳಿಸಿದರು.

ಸಹಾಯಕ ಚುನಾವಣಾಧಿಕಾರಿ ಡಾ.ಹನುಮಂತಗೌಡ ಜಿ., ಯಲಿಗಾರ ಒಪ್ಪತ್ತೆಪ್ಪ ನೇಮಕಗೊಂಡಿದ್ದಾರೆ. ಸದಸ್ಯರು ಚುನಾವಣಾ ಪ್ರಕ್ರಿಯೆಲ್ಲಿ ಪಾಲ್ಗೊಮಡು ಚುನಾಯಿತ ಘಟಕ ರಚನೆ ಮಾಡಲು ಸಹಕರಿಸಬೇಕು ಎಂದರು.

# ಜಿಲ್ಲಾ ತಾಲೂಕು ಕೇಂದ್ರಗಳಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ ಕಡ್ಡಾಯ

**ಹಂಪಿ ಟೈಮ್ಸ್ ಹೊಸಪೇಟೆ**



ಜೂನ್ ಮಾಹೆಯಲ್ಲಿ 27ರಂದು ನಿಗದಿಯಾದ ಶ್ರೀ ನಾಡಪ್ರಭು ಕೆಂಪೇಗೌಡರ ಜಯಂತಿಯ ಆಚರಣೆ ನಿಮಿತ್ತ ಸೋಮವಾಖು ವಿಜಯನಗರ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ ಅವರು ಜಿಲ್ಲೆಯ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿ ಪೂರ್ವಭಾವಿ ಸಿದ್ಧತೆಗೆ ನಿರ್ದೇಶನ ನೀಡಿ ಮಾತನಾಡಿದರು. ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಪ್ರತಿ ತಾಲೂಕುಗಳಲ್ಲಿ ಯಾವುದೇ ಅಡಚಣೆ ಇಲ್ಲದೆ ಅಚ್ಚುಕಟ್ಟಾಗಿ ವೇದಿಕೆ ಕಾರ್ಯಕ್ರಮ, ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲು ಜಿಲ್ಲೆಯ ಎಲ್ಲಾ ತಾಲೂಕುಗಳ ತಹಶಿಲ್ದಾರರು ಕ್ರಮ ಕೈಗೊಳ್ಳಬೇಕು. ಜೊತೆಗೆ ಕಲಾತಂಡಗಳನ್ನು ಒದಗಿಸಲು ಸಹಾಯಕ ನಿರ್ದೇಶಕರು >>4

# ಮಳೆ, ಬೆಳೆ, ಆರೋಗ್ಯಕ್ಕಾಗಿ ರಥಮ್ಮಗೆ ಪೂಜೆ ಪ್ರಾರ್ಥನೆ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಗ್ರಾಮದೇವತೆ ಶ್ರೀ ಊರಮ್ಮ ದೇವಿಗೆ ಮಂಗಳವಾರ ವಿಶೇಷ ಪೂಜೆ ಸಲ್ಲಿಸಿ, ಈವರ್ಷ ಉತ್ತಮ ಮಳೆ, ಬೆಳೆ ಮತ್ತು ಸಾಂಕ್ರಾಮಿಕ ರೋಗಗಳು ಹರಡದಂತೆ ಪ್ರಾರ್ಥಿಸಿ, ಸಂಜೆ ನಗರದಿಂದ ವಿಜೃಂಭಣೆಯಿಂದ ದೇವಿಯನ್ನು ಸಾಂಪ್ರದಾಯಿಕ ಆಚರಣೆ ಮೂಲಕ ರಥಮ್ಮನನ್ನು ಮಾಡಿ ನಗರದ ಜನತೆ ಕಳುಹಿಸಿದರು.

ನಗರದ ಊರಮ್ಮ ದೇವಿಗೆ ಬೆಳಿಗ್ಗೆಯಿಂದಲೇ ಭಕ್ತರು ಹಣ್ಣು, ಹೂ, ಕಾಯಿ, ನೈವೈದ್ಯ ಸಮರ್ಪಿಸಿ ಭಕ್ತಿ ಸೇವೆ ಸಲ್ಲಿಸಿದರು. ಊರಮ್ಮ ದೇವಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಏಳು ಕೇರಿಯ ಜನರು ಅಮ್ಮನನ್ನು ವಾಲ್ಮೀಕ ವೃತ್ತ, ಮದಕರಿ ನಾಯಕ ವೃತ್ತದ ಮಾರ್ಗವಾಗಿ ಹಂಪಿ ರಸ್ತೆ, ಅನಂತಶಯನಗುಡಿ ಮಾರ್ಗ ಕಳುಹಿಸಿದರು. ರಸ್ತೆಯುದ್ದಕ್ಕೂ ಅಮ್ಮನಿಗೆ, ರೈತರು, ಭಕ್ತರು ಭಕ್ತಿಪೂರ್ವಕವಾಗಿ ನಮಿಸಿ, ಪ್ರಾರ್ಥಿಸಿದರು. ಶ್ರೀ ಗ್ರಾಮದೇವತಾ ಊರಮ್ಮ ದೇವಸ್ಥಾನದ ಜೀರ್ಣೋದ್ಧಾರ ಅಭಿವೃದ್ಧಿ ಸಮಿತಿ ಅಧ್ಯಕ್ಷರು, ನಿರ್ದೇಶಕರು, ಅರ್ಚಕರು ಇತರರು ಇದ್ದರು.




ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ


E-Paper

Now HAMPI TIMES E-Paper has been reached

70000 PlUS Readers

Place Your Ads here

Reach New Audience



www.hampitimes.com
epaper.hampitimes.com
hampitimes@gmail.com
@hampitimes

Contact for News, Events & Advertisements
94486 33038

ಹಂಪಿ ಟೈಮ್ಸ್
HAMPI TIMES

## ವಿಜ್ಞಾನ

# ಧೂಮಕೇತುವಿಗೆ ಬಾಲ ಏಕೆ ಇರುತ್ತದೆ?

■ **ಆರ್.ಬಿ.ಗುರುಬಸವರಾಜ**

'ಜಗ್ಗ ಎದ್ದೇಳು ರಾತ್ರಿ ಹನ್ನೆರಡು ಗಂಟೆ ಆಯ್ತು. ಆಕಾಶದಲ್ಲಿ ಧೂಮಕೇತು ಕಾಣಿಸ್ತಾ ಇದೆ. ನೋಡೋಣ ಬಾ" ಎಂದು ತಾತ ಜಗ್ಗುವನ್ನು ಎಬ್ಬಿಸಿದರು. ನಿದ್ದೆಗಣ್ಣಿನಿಂದ ಕಣ್ಣೊರೆಸಿಕೊಳ್ಳುತ್ತಾ ತಾತನ ಜೊತೆ ಟೆರೇಸ್ ಮೇಲೆ ಹೋದನು ಜಗ್ಗು. ಶುಭ್ರವಾದ ಕಪ್ಪು ಆಗಸದಲ್ಲಿ ಪ್ರಕಾಶಮಾನವಾದ ಧೂಮಕೇತವನ್ನು ಬಹಳ ಹೊತ್ತಿನವರೆಗೂ ನೋಡಿದ ಜಗ್ಗು, "ತಾತ, ಧೂಮಕೇತುವಿಗೆ ಬಾಲ ಏಕೆ ಇದೆ?" ಎಂದ. ತಾತ ನಡುಗುವ ಧ್ವನಿಯಲ್ಲಿ ಧೂಮಕೇತವಿನ ಬಾಲದ ವಿವರಣೆ ನೀಡಿದರು.

ಧೂಮಕೇತುಗಳು ಮಂಜುಗಡ್ಡೆ, ಧೂಳು ಮತ್ತು ಸಣ್ಣ ಕಲ್ಲಿನ ಕಣಗಳಿಂದ ಕೂಡಿರುತ್ತವೆ. ಧೂಮಕೇತು ಸೂರ್ಯನಿಂದ ದೂರದಲ್ಲಿರುವಾಗ ಘನವಾಗಿ ಘನೀಕರಿಸಲಾಗಿರುತ್ತದೆ. ಅದು ಸೂರ್ಯನನ್ನು ಸಮೀಪಿಸುತ್ತಿದ್ದಂತೆ, ಶಾಖವು ಅದರಲ್ಲಿ ಒಂದಿಷ್ಟು ಮಂಜುಗಡ್ಡೆಯನ್ನು ಆವಿಯಾಗುವಂತೆ ಮಾಡುತ್ತದೆ. ಅನಿಲ ಮತ್ತು ಧೂಳನ್ನು ಉತ್ಪಾದಿಸುತ್ತದೆ. ಅದು ಬಾಹ್ಯಾಕಾಶಕ್ಕೆ ಬಿಡುಗಡೆಯಾಗುತ್ತದೆ. ಈ ಅನಿಲ ಮತ್ತು ಧೂಳು ಧೂಮಕೇತುವಿನ ಸುತ್ತ ಕೋಮಾ ಎಂಬ ಮೋಡವನ್ನು ರೂಪಿಸುತ್ತದೆ. ಸೂರ್ಯನ ವಿಕಿರಣ ಮತ್ತು ಸೌರ ಮಾರುತಗಳು ಕೋಮಾದೊಂದಿಗೆ ಸಂವಹನ ನಡೆಸುವುದರಿಂದ, ಅವು ಅನಿಲ ಮತ್ತು ಧೂಳಿನ ಕಣಗಳನ್ನು ಸೂರ್ಯನಿಂದ ದೂರ ತಳ್ಳುತ್ತವೆ. ಇದು ಸೂರ್ಯನ ವಿರುದ್ಧ ದಿಕ್ಕಿನಲ್ಲಿದ್ದು ಬಾಲದಂತೆ ಗೋಚರಿಸುತ್ತದೆ. ಧೂಮಕೇತುಗಳು ಎರಡು ವಿಭಿನ್ನ ಬಾಲಗಳನ್ನು ರಚಿಸುತ್ತವೆ. ಒಂದು ಅಯಾನು ಬಾಲ ಮತ್ತು ಇನ್ನೊಂದು ಧೂಳಿನ ಬಾಲ. ಅಯಾನು ಬಾಲವು ಅಯಾನೀಕೃತ ಅನಿಲ ಕಣಗಳಿಂದ ಕೂಡಿರುತ್ತದೆ. ಅದು ಸೂರ್ಯನ ಕಾಂತೀಯ ಕ್ಷೇತ್ರದಿಂದ ಪ್ರಭಾವಿತವಾಗಿರುತ್ತದೆ ಮತ್ತು ಸೂರ್ಯನಿಂದ ನೇರವಾಗಿ ತಳ್ಳಲ್ಪಡುತ್ತದೆ. ಧೂಳಿನ ಬಾಲ ದೊಡ್ಡದಾದ ಧೂಳಿನ ಕಣಗಳಿಂದ ಕೂಡಿದ್ದು, ಅದು ಸೂರ್ಯನ ಬೆಳಕಿನ ಒತ್ತಡದಿಂದ ತಳ್ಳಲ್ಪಡುತ್ತದೆ ಮತ್ತು ಸೂರ್ಯನಿಂದ ದೂರಕ್ಕೆ ವಕ್ರವಾಗಿರುತ್ತದೆ.



ಎರಡೂ ಬಾಲಗಳು ಧೂಮಕೇತುವಿನ ನ್ಯೂಕ್ಲಿಯಸ್‌ನಿಂದ ಮಿಲಿಯನ್‌ಗಟ್ಟಲೆ ಕಿಲೋಮೀಟರ್‌ಗಳಷ್ಟು ದೂರದವರೆಗೆ ವಿಸ್ತರಿಸಬಲ್ಲವು. ಅವು ಭೂಮಿಯಿಂದ ಬರಿಗಣ್ಣಿಗೆ ಗೋಚರಿಸುತ್ತವೆ. ಧೂಮಕೇತುವಿನ ಬಾಲವು ತಾತ್ಕಾಲಿಕ ಲಕ್ಷಣವಾಗಿದ್ದು, ಧೂಮಕೇತು ಸೂರ್ಯನಿಗೆ ಸಮೀಪದಲ್ಲಿದ್ದಾಗ ಮಾತ್ರ ಕಾಣಿಸಿಕೊಳ್ಳುತ್ತದೆ. ಧೂಮಕೇತು ಸೂರ್ಯನಿಂದ ದೂರ ಹೋದಂತೆ ಕೋಮಾದಲ್ಲಿನ ಬಾಷ್ಪಶೀಲ ವಸ್ತುಗಳು ಮತ್ತೆ ಹೆಪ್ಪುಗಟ್ಟುತ್ತವೆ ಮತ್ತು ಬಾಲವು ಕಣ್ಮರೆಯಾಗುತ್ತದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಎಷ್ಟೇ ಕಷ್ಟ ಬಂದರು ಸರಿ ಸತ್ಯದ ದಾರಿ ಬಿಡಬೇಡ

ಒಂದು ಪುಟ್ಟ ಊರಿನಲ್ಲಿ ಅಮ್ಮ ಮತ್ತು ಮಗ ಚಂದ್ರು ಇದ್ದರು. ಅಮ್ಮ ಮಗನಿಗೆ ಒಳ್ಳೆಯ ಗುಣ ಕಲಿಸುತ್ತೀದ್ದಳು, ಪೂಜಾ ಪುನಸ್ಕಾರ, ನೀತಿ ಕಥೆ ಎಲ್ಲವನ್ನು ಕಲಿಸುತ್ತೀದ್ದಳು.ಚಂದ್ರು ತುಂಬಾ ಬುದ್ಧಿವಂತ ಚೆನ್ನಾಗಿ ಓದುತ್ತಿದ್ದನು, ಶಿಕ್ಷಕರ ಅಚ್ಚು ಮೆಚ್ಚಿನ ವಿದ್ಯಾರ್ಥಿ ಆಗಿದ್ದನು.

ಅಮ್ಮ ಕೂಲಿ ಮಾಡಿ ಮಗನೊಂದಿಗೆ ಖುಷಿಯಾಗಿ ಜೀವನ ಸಾಗಿಸುತ್ತಿದ್ದಾಗ, ನಿರ್ಮಾಣ ಹಂತದಲ್ಲಿ ಇರುವ ಕಟ್ಟಡ ಕುಸಿದು ಅಮ್ಮನ ಮೇಲೆ ಬಿದ್ದು, ಅಮ್ಮನ ಕಾಲು ಮುರಿಯಿತು. ಅಮ್ಮನ ಮೇಲೆ ಅವಲಂಬನೆ ಇರುವ ಚಂದ್ರು ಭಯದಿಂದ ಕಂಗಾಲಾದ. ಅಮ್ಮನ ಸ್ಥಿತಿ ಚಿಂತಾಜಾನಕ ಆಗಿತ್ತು, ಅಮ್ಮ ಕೆಲಸಕ್ಕೆ ಹೋಗಲು ಆಗದೆ ಒಂದು ಹೊತ್ತಿನ ಊಟಕ್ಕೂ ಪರದಾಡುವಂತಾಯಿತು. ನಾನು ಶಾಲೆಗೆ ಹೋದರೆ ಮನೆ ಹೇಗೆ ನಡಿಯಬೇಕು? ಎಂದು ಯೋಚಿಸಿದ ಚಂದ್ರು ಕೊನೆಗೆ ಅಸಹಾಯಕತೆಯಿಂದ ಶಾಲೆಯನ್ನು ಬಿಟ್ಟು ಕೃಷ್ಣನೆ ಗೌಡರು ಎಂಬ ಶ್ರೀಮಂತರೊಬ್ಬರ ಮನೆಯಲ್ಲಿ ಕೆಲಸಕ್ಕೆ ಸೇರಿಕೊಂಡ.

ಅಮ್ಮನ ಆರೈಕೆ ಮನೆ ಖರ್ಚು ಎಲ್ಲಾ ಚಂದ್ರು ನೋಡಿ ಕೊಳ್ಳುತ್ತಿದ್ದನು. ಬುದ್ಧಿವಂತನು ಆದ ಚಂದ್ರು ಮನೆಯ ಒಡತಿ ರಾಧಮ್ಮ ಹೇಳಿದ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದನು, ನಂತರ ಕೃಷ್ಣೆ ಗೌಡರ ಪುಟ್ಟ ಮಗಳು ಪುಟ್ಟಿಯನ್ನು ಆಟ ಆಡಿಸುತ್ತಿದ್ದನು, ಎಷ್ಟೆ ಆಟಿಕೆ, ತಿಂಡಿ ತಿನಿಸುಗಳಿದ್ದರು ರಾಧಮ್ಮ ಕೊಡುವವರೆಗೂ ಇವರ ಅನುಮತಿ ಇಲ್ಲದೆ ಮುಟ್ಟುತ್ತಿರಲ್ಲಿ, ಆದರೆ ಇವರ ಹಿರಿಯ ಮಗ ರವಿಯನ್ನು ಹಿಂಬಾಲಿಸುತ್ತೀದನು, ಅವನ ಹಿಂದೆ ಹಿಂದೆ ಹೋಗುತ್ತಿದನ್ನು, ಯಾಕೆ ಅಂದರೆ ಅವನು ಮನೆಯಲ್ಲಿ ಓದುತ್ತಿರುವಾಗ, ಮನೇಪಾಠ ಕ್ಕೆ ಮೇಷ್ಟ್ರು ಬಂದು ಪಾಠ ಮಾಡುವಾಗ ಅಲ್ಲೆ ಕುಳಿತು ಪಾಠ ಕೇಳುತ್ತಿದ್ದನು.

ಎಲ್ಲರ ಮೆಚ್ಚಿನ ಚಂದ್ರುನ ಮೇಲೆ, ಶಾಂತಮ್ಮಗೆ ತುಂಬಾ ಹೊಟ್ಟೆಉರಿ, ಯಾಕಂದರೆ ಇವಳು ಚಿಕ್ಕ ಪುಟ್ಟ ಕಳ್ಳತ್ತನ ಮಾಡಿ ಮಗನ ಕೈಯಲ್ಲಿ ಕೊಟ್ಟು ಮನೆಗೆ ಕಳಿಸುತ್ತಿದಳು. ಚಂದ್ರು ಆಗಾಗ ನೋಡಿದ್ದು ಇವಳಿಗೆ ಗೊತ್ತಿತ್ತು, ಯಾವಾಗಲು ಚಂದ್ರುನ ಬಗ್ಗೆ ಇಲ್ಲ ಸಲ್ಲದ ಆಪಾದನೆ ಮಾಡುತ್ತಿದ್ದಲು, ಎಲ್ಲವನ್ನು ಅರಿತ ಕೃಷ್ಣೆ ಗೌಡರು ಸುಮ್ಮನಿರುತ್ತಿದ್ದರು. ಇತ್ತ ಕಡೆ ಅಮ್ಮನ ಆರೋಗ್ಯದಲ್ಲಿ ಕೊಂಚ ಸುಧಾರಣೆ ಆಗತೊಡಗಿತ್ತು. ಅಷ್ಟರಲ್ಲಿ ಪುಟ್ಟಿಯ ಹುಟ್ಟುಹಬ್ಬದ ಸಂಭ್ರಮ, ಚಿನ್ನದ ಸರದಿಂದ ಪುಟ್ಟಿಯನ್ನು ಶೃಂಗರಿಸಿದರು.



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ

Hampi Times E-paper
SCAN AND READ

ಹುಟ್ಟುಹಬ್ಬದ ಆಚರಣೆ ಮಾಡಿ ಎಲ್ಲರೂ ಊಟ ಮಾಡಿ ಮನೆಗೆ ಹೊರಟು ಹೋದರು, ಅಷ್ಟರಲ್ಲಿ ಪುಟ್ಟಿಯ ಚಿನ್ನದ ಸರ ಮಾಯಾ ವಾಗಿತ್ತು.. ರಾಧಮ್ಮ ಗಾಬರಿಯಿಂದ ಕಿರುಚಾಡುತ್ತಿದಂತೆ ಶಾಂತಮ್ಮ ಓಡೋಡಿ ಬಂದು ಅಮ್ಮೋರೆ ನಾನು ಆಗಾಗ ಹೇಳುತಿದ್ದೆ ಅಲ್ವಾ ಚಂದ್ರು ಚೆನ್ನಾಗಿಲ್ಲ ಇವನೆ ಕಳವು ಮಾಡಿದ್ದಾನೆ ಅಂತ... ಅಷ್ಟರಲ್ಲಿ ರಾಧಮ್ಮ ಕೋಪಗೊಂಡು ಚಂದ್ರುವಿಗೆ ಮನಬಂದಂತ್ತೆ ಥಳಿಸಿದಳು.



ಚಂದ್ರು ಒಂದು ಮಾತು ಕೂಡ ಆಡದೆ ಮನೆಗೆ ಹೋಗಿ, ಮಾರಾನೇ ದಿನ ಕೆಲಸಕ್ಕೆ ಬಂದನು ರಾಧಮ್ಮ ಅವನಿಗೆ ಮೂಲೆಯಲ್ಲಿ ಕೂಡಿಹಾಕಿ ಪೊಲೀಸರಿಗೆ ಒಪ್ಪಿಸಲು ಕರೆ ಮಾಡುತ್ತಿದಂತ್ತೆ, ಕೃಷ್ಣೆ ಗೌಡರು ಪೊಲೀಸ್ ಹಾಗೂ ಒಬ್ಬ ಬಾಲಕನೊಂದಿಗೆ ಮನೆಗೆ ಬಂದರು. ಅನುಮಾನಾಸ್ಪದವಾಗಿ ಚಿನ್ನದ ಸರ ಮಾರಲು ಓಡಾಡುತ್ತಿದ ಈ ಬಾಲಕ ಶಾಂತಮ್ಮಳ ಮಗ, ಈ ಸರ ಪುಟ್ಟಿಯದು ಎಂದು ತಿಳಿದುಬಂತ್ತು ಎನ್ನುವಾಗ ಓಡಲು ಯತ್ನಿಸುತ್ತಿದ ಶಾಂತಮ್ಮಳನ್ನು ಪೊಲೀಸರು ವಶಕ್ಕೆ ಪಡೆದು, ಇವಳೆ ಕಳ್ಳತನ ಮಾಡಿ ಸಾಮಾನುಗಳನ್ನು ಹಾಗೂ ಚಿನ್ನದ ಸರ ಮಗನ ಕೈಯಿಂದ ಕಳುಹಿಸುತ್ತಿದ್ದ ಸತ್ಯ ಎಲ್ಲರಿಗೂ ಗೊತ್ತಾಯಿತು. ರಾಧಮ್ಮ ಸುಮ್ಮನೆ ನಿಂತಿದ್ದ ಚಂದ್ರುನ ಹತ್ತಿರ ಹೋಗಿ ಕ್ಷಮೆ ಕೇಳಿದರು. ಚಂದ್ರುವಿನ ಪರಿಸ್ಥಿತಿ ಬಗ್ಗೆ ತಿಳಿದುಕೊಂಡ ಕೃಷ್ಣೆ ಗೌಡರು ಚಂದ್ರುನನ್ನು ಶಾಲೆಗೆ ಸೇರಿಸಿದರು, ಅವರ ಅಮ್ಮನಿಗೂ ಕೆಲಸ ಕೊಟ್ಟರು. ಹೀಗೆ ಪ್ರಾಮಾಣಿಕತೆಯಿಂದ ಚಂದ್ರು ಮುಂದೆ ಚೆನ್ನಾಗಿ ಓದಿ ದೊಡ್ಡ ಅಧಿಕಾರಿಯಾದನು..

# ಮಿಷನ್ ಶಕ್ತಿ ಯೋಜನೆಯಡಿ ವಿವಿಧ ಹುದ್ದೆಗೆ ಅರ್ಜಿ ಸಲ್ಲಿಸಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕೇಂದ್ರ ಸರ್ಕಾರದ ಮಿಷನ್ ಶಕ್ತಿ ಯೋಜನೆಯಡಿ ಜಿಲ್ಲಾ ಮಹಿಳಾ ಸಬಲೀಕರಣ ಘಟಕದಲ್ಲಿ (ಡಿಎಚ್‌ಇಡಬ್ಲೂ) ವಿಜಯನಗರ ಜಿಲ್ಲೆಗೆ ಮಂಜೂರಾಗಿರುವ 4 ಹುದ್ದೆಗಳನ್ನು ಷರತ್ತಿಗೊಳಪಟ್ಟು ಸೃಜಿಸಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಬೇಕಾಗಿರುತ್ತದೆ. ಸದರಿ ಹುದ್ದೆಗಳ ಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಜುಲೈ 10 ರಂದು ಸಂಜೆ 5:30 ರೊಳಗಾಗಿ ನೇರವಾಗಿ ಕಚೇರಿಗೆ ಸಲ್ಲಿಸಬಹುದಾಗಿದೆ.

ಯೋಜನೆಯಡಿ ಕಾರ್ಯನಿರ್ವಹಿಸಲು ತೆಗೆದುಕೊಳ್ಳುವ ಸಿಬ್ಬಂದಿಗೆ ಕ್ರೂಢಿಕೃತ ಆಧಾರದ ಮೇಲೆ ಗೌರವಧನ ನೀಡಲಾಗುವುದು. ಹುದ್ದೆಗಳು ತಾತ್ಕಾಲಿಕವಾಗಿದ್ದು, ಯೋಜನೆ ಜಾರಿಯಲ್ಲಿರುವವರೆಗೆ ಮಾತ್ರ ಇರುತ್ತದೆ. ಜಿಓಐ ನಿರ್ದಿಷ್ಟ ಪಡಿಸಿದಂತ ಅರ್ಹತಾ ಮಾನದಂಡವನ್ನು ಹೊಂದಿದವರನ್ನು ಮಾತ್ರ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು., ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಗಳು ಕನಿಷ್ಠ 18 ಪೂರೈಸಿರಬೇಕು ಹಾಗೂ ಗರಿಷ್ಠ 45 ವರ್ಷ ಮಿರಿರಬಾರದು., ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸುತ್ತಿದ್ದಲ್ಲಿ ಹುದ್ದೆವಾರು ಪ್ರತ್ಯೇಕ ಅರ್ಜಿ ಸಲ್ಲಿಸುವುದು ಹಾಗೂ ಲಕೋಟೆ ಮೇಲೆ ಹುದ್ದೆ ನಮೂದಿಸುವುದು., ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಾತನಾಡುವ, ಬರೆಯುವ, ಓದುವ ಮತ್ತು ಸಂಪೂರ್ಣವಾಗಿ ವ್ಯವಹರಿಸುವ ಪರಿಜ್ಞಾನ ಹೊಂದಿರತಕ್ಕದ್ದು, ಹಿಂದಿ ಭಾಷೆಯ ಪರಿಣಿತಿ ಹೊಂದಿರುವುದು ಅಪೇಕ್ಷಣೀಯ., ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಪ್ತಗಿರಿ ಶಾಲೆಯ ಹತ್ತಿರ ಮೆಟ್ರೋ ಫ್ಯಾಷನ್ ಮೇಲಿನ ಮಹಡಿ, ಬಸವೇಶ್ವರ ಬಡಾವಣೆ ವಿಜಯನಗರ ಮೊ.9742064639ಗೆ ಸಂಪರ್ಕಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ವಿವಿಧ ಹುದ್ದೆಗಳು ಮತ್ತು ವಿದ್ಯಾರ್ಹತೆಯ ವಿವರ ಈ ಮುಂದಿನಂತಿರುತ್ತದೆ.

ಜಿಲ್ಲಾ ಮಿಷನ್ ಸಂಯೋಜಕರು 1 ಹುದ್ದೆ: ಸಾಮಾಜಿಕ ವಿಜ್ಞಾನ, ಜೀವ ವಿಜ್ಞಾನ, ಪೋಷಣೆ, ಮೇಡಿಸಿನ್, ಆರೋಗ್ಯ ನಿರ್ವಹಣೆ, ಸಮಾಜ ಕಾರ್ಯ, ಗ್ರಾಮೀಣ ನಿರ್ವಹಣೆಯಲ್ಲಿ ಪದವಿ ಹೊಂದಿರಬೇಕು, ಸ್ನಾತಕೋತ್ತರ ಪದವೀಧರರಿಗೆ ಆದ್ಯತೆ ನೀಡಲಾಗುವುದು, ಕೇಂದ್ರಿತ ವಿಷಯಗಳಲ್ಲಿ ಸರ್ಕಾರ/ಸರ್ಕಾರೇತರ ಸಂಸ್ಥೆಗಳೊಂದಿಗೆ 3 ವರ್ಷಗಳ ಕೆಲಸದ ಅನುಭವ ಹೊಂದಿರಬೇಕು.


ಪ್ರಧಾನಮಂತ್ರಿ ಮಾತೃವಂದನ ಯೋಜನೆಯ ಸಂಯೋಜಕರು 1 ಹುದ್ದೆ: ಸಾಮಾಜಿಕ ವಿಜ್ಞಾನದಲ್ಲಿ ಪದವೀಧರ, ಜೀವ ವಿಜ್ಞಾನ, ಪೋಷಣೆ, ಮೇಡಿಸಿನ್, ಆರೋಗ್ಯ ನಿರ್ವಹಣೆ, ಸಮಾಜ ಕಾರ್ಯ, ಗ್ರಾಮೀಣ ನಿರ್ವಹಣೆಯಲ್ಲಿ ಪದವಿ ಹೊಂದಿರಬೇಕು, ಸ್ನಾತಕೋತ್ತರ ಪದವೀಧರರಿಗೆ ಆದ್ಯತೆ ನೀಡಲಾಗುವುದು, ಕೇಂದ್ರಿತ ವಿಷಯಗಳಲ್ಲಿ ಸರ್ಕಾರ/ಸರ್ಕಾರೇತರ ಸಂಸ್ಥೆಗಳೊಂದಿಗೆ 3 ವರ್ಷಗಳ ಕೆಲಸದ ಅನುಭವ ಹೊಂದಿರಬೇಕು.

ಹಣಕಾಸು ಸಾಕ್ಷರತೆ ಮತ್ತು ಲೆಕ್ಕಶಾಸ್ತ್ರದಲ್ಲಿ ತಜ್ಞ: ಅರ್ಥಶಾಸ್ತ್ರ, ಬ್ಯಾಂಕಿಂಗ್, ಇತರೆ ವಿಭಾಗಗಳಲ್ಲಿ ಪದವೀಧರರು, ಸ್ನಾತಕೊತ್ತರ ಪದವೀಧರರಿಗೆ ಆದ್ಯತೆ ನೀಡಲಾಗುವುದು, ಹಣಕಾಸು ಸಾಕ್ಷರತೆ /ಆರ್ಥಿಕ ಸೇರ್ಪಡೆಕೇಂದ್ರಿತವಿಷಯಗಳನ್ನುಸರ್ಕಾರ/ಸರ್ಕಾರೇತರ ಸಂಸ್ಥೆಗಳೊಂದಿಗೆ 3 ವರ್ಷ ಕೆಲಸದ ಅನುಭವ ಹೊಂದಿರಬೇಕು.

ಗಣಕಯಂತ್ರ ನಿರ್ವಾಹಕರು ಮತ್ತು ಮಾತೃವಂದನ ಯೋಜನೆಯ ಕಾರ್ಯಕ್ರಮ ಸಂಯೋಜಕರು 1 ಹುದ್ದೆ: ಗಣಕಯಂತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಗಳಿಸಿರುವವರು ಅರ್ಜಿ ಸಲ್ಲಿಸಬಹುದಾಗಿದೆ.

# ಸ್ವರಗಳ ಬಲದಿಂದ ಧ್ವನಿ ಶ್ರೀಮಂತ

■ **ಅಚಲ ಜಿ ಎಸ್**, ಹೊಸಪೇಟೆ



ಕರ್ನಾಟಕ ಸಂಗೀತದ ಇತಿಹಾಸವು ಮಾಯಾಮಾಳವಗೌಳ ರಾಗದ ಪದ್ಧತಿಯನ್ನು ಸಂಗೀತ ಪಿತಾಮಹ ಪುರಂದರ ದಾಸರಿಂದ ಪರಿಚಯಿಸಲಾಯಿತು ಎಂದು ಹೇಳುತ್ತದೆ. ಮಾಯಾಮಾಳವ ಗೌಳವು ಕರ್ನಾಟಕ ಸಂಗೀತದ 72 ಮೇಳಕರ್ತ ರಾಗ ವ್ಯವಸ್ಥೆಯಲ್ಲಿ 15 ನೇ ಮೇಳಕರ್ತ ರಾಗವಾಗಿದೆ.

ಈ ರಾಗವು 3 ನೇ ಚಕ್ರದಲ್ಲಿ 3ನೇ ರಾಗವಾಗಿದೆ – ಅಗ್ನಿ ಚಕ್ರ. ಮನಸ್ಸು, ದೇಹ ಮತ್ತು ಆತ್ಮ ಚಕ್ರದಲ್ಲಿ – 3ನೆ ಚಕ್ರ ಕುಂಡಲಿನಿ ಚಕ್ರವಾಗಿದ್ದು ಅದು ಆನಂದ ಕೇಂದ್ರಗಳನ್ನು ಆಳುತ್ತದೆ. ರಾಗಗಳು ಕುಂಡಲಿನಿಯ ಹಾದಿಯಲ್ಲಿ ವಿವಿಧ "ಚಕ್ರಗಳ" (ಶಕ್ತಿ ಕೇಂದ್ರಗಳು) ಪರಿಣಾಮಬೀರುತ್ತವೆಎಂದುನಂಬಲಾಗಿದೆ.ಸೂಕ್ತವಾಗಿಮಾಯಾಮಾಳವಗೌಳ ಕುಂಡಲಿನಿ ಚಕ್ರಕ್ಕೆ ಸೇರಿದೆ.

ಈ ದೈವಿಕ ರಾಗವು ಶಾಂತ ರಸ, ಭಕ್ತಿ ರಸವನ್ನು ಧರ್ಮನಿಷ್ಠೆಯನ್ನು ಪ್ರಚೋದಿಸುತ್ತದೆ. ರಾಗವು ಸಂಪೂರ್ಣವಾಗಿ ವಿಶ್ರಾಂತಿ ಮತ್ತು ಧ್ಯಾನದ ಪರಿಣಾಮವನ್ನು ಹೊಂದಿದೆ. ಈ ರಾಗವನ್ನು ಸಾಮಾನ್ಯವಾಗಿ ಶಿಶಿರ ಋತುವಿಗೆ – ಮಂಗಳಕರವಾದ ಧನುರ್ ಮಾಸಕ್ಕೆ ಸೂಚಿಸಲಾಗುತ್ತದೆ.

ಈ ರಾಗವು ನಮ್ಮ ದೇಹದಲ್ಲಿನ ವಿಷವನ್ನು ತಟಸ್ಥಗೊಳಿಸುವ ಸಾಮರ್ಥ್ಯವನ್ನು ಹೊಂದಿದೆ, ಆದ್ದರಿಂದ ಇದನ್ನು ಪ್ರತಿದಿನ ಬೆಳಿಗ್ಗೆ ಹಾಡಲು ಸೂಚಿಸಲಾಗುತ್ತದೆ. ಈ ರಾಗವನ್ನು ಮುಂಜಾನೆ ನಿಸರ್ಗದ ಮಧ್ಯೆ ಅಭ್ಯಾಸ ಮಾಡುವುದರಿಂದ ಸ್ವರಗಳ ಬಲ ಹೆಚ್ಚುತ್ತದೆ. ಈ ರಾಗದ ವಿಶೇಷತೆಯೆಂದರೆ ಇದು ಸ್ವರ ಸ್ನಾಯುಗಳಿಗೆ ಅತ್ಯುತ್ತಮವಾಗಿದೆ. ಈ ರಾಗದ ನಿರಂತರ ಅಭ್ಯಾಸವು ನಿಮ್ಮ ಧ್ವನಿಗೆ ಶ್ರೀಮಂತ ಧ್ವನಿಯನ್ನು ನೀಡುತ್ತದೆ. ಈ ರಾಗದಲ್ಲಿ ಹಲವಾರು ಧ್ವನಿ ಸಂಸ್ಕೃತಿಯ ವ್ಯಾಯಾಮಗಳಿವೆ.

ಈ ರಾಗವು ಹಿಂದೂಸ್ತಾನಿ ಸಂಗೀತದ ಭೈರವ್ ಥಾಟ್‌ಗೆ ಅನುರೂಪವಾಗಿದೆ. ಈ ರಾಗದ ಮೂಲ ಹೆಸರು ಮಾಳವಗೌಳ. 72 ಮೇಳಕರ್ತ ಯೋಜನೆಯಲ್ಲಿ ಅದರ ಸಂಖ್ಯೆಯನ್ನು 15 ಮಾಡಲು "ಮಾಯಾ" ಕಟಪಯಾದಿ ಪೂರ್ವಪ್ರತ್ಯಯವಾಗಿರಬಹುದು. ಮಾಯಾ ಎಂದರೆ ತಾಯಿ, ಸುಂದರವಾದ ಮತ್ತು ಮೋಡಿಮಾಡುವ ಎಲ್ಲದರ ದೇವತೆಯನ್ನು ಸೂಚಿಸುತ್ತದೆ. ಆದ್ದರಿಂದ ಅದರ ಹೆಸರಿನಲ್ಲಿಯೇ ಸೊಬಗು ಮತ್ತು ಮೋಡಿಮಾಡುವಿಕೆ ಇದೆ.

**ಕವಿ ಮನಸು**

## ಮುಂದಿಟ್ಟ ಹೆಜ್ಜೆ...

ಹಿಂದಿಟ್ಟ ಹೆಜ್ಜೆ ಮುಂದಿಡುವಾಗ
ಹಿಂದಿನ ಹೆಜ್ಜೆ ಮರೆಯಬಾರದಂತೆ
ನಿನ್ನಿನ ಜೀವನದ ದಿನಚರಿ ನೆನೆದಾಗ
ಈ ದಿನದ ದಿನಚರಿ ಚಂದನವನದಂತೆ।

ಬಡತನ ಸಿರಿತನ ಬರುವಾಗ
ಕುಗ್ಗು ಹಿಗ್ಗು ಬರಬಾರದು ಆಗ
ಮದ ಮತ್ಸರ ಸುಳಿಯದಂತಿರು
ಎಲ್ಲರೊಳು ಪ್ರೇಮ ಭಾವದಿಂದಿರು।

ಹೆಣ್ಣು ಹೊನ್ನು ಬರುತ್ತವೆ ಬಾಳಲಿ
ಬಂದಾಗ ಕೊಬ್ಬದಿರು ಹಿಗ್ಗದಿರು
ಎರಡು ಅಪಾಯ ತರುತ್ತವೆ ಹುಷಾರು
ಅಪಾಯ ಬಂದಾಗ ಮಾಡಿಕೊಳ್ಳದಿರು
ಕೆಸರು।

ಇದ್ದು ಇಲ್ಲದಂತಿರುವುದು ಪಾವನ
ಮಾತು ಬಂದರೂ ಬರದಂತಿರು ಮೌನ
ತಾಳ್ಮೆ ಸಹಕಾರ ಬಾಳಲಿ ಇರಲಿ ಪ್ರತಿನಿತ್ಯ
ಅರಿಷ್ಟ ವರ್ಗಗಳು ಸುಳಿಯಲಾರವು ಸತ್ಯ।

ಸಿರಿತನ ಅಧಿಕಾರಕ್ಕೆ ಮಂದಿ ಬಹಳ ಬಹಳ
ತಮ್ಮದು ಸಾಧಿಸಿಕೊಂಡು ಮಾಡುವರು
ಕರಾಳ
ಅಡಿಕೆಗೆ ಹೋದ ಮಾನ ಆನೆ ಕೊಟ್ಟರು
ಬರದು
ಕಳೆದು ಹೋದ ಪ್ರೀತಿ ವಾತ್ಸಲ್ಯ ಬರುವುದು
ವಿರಳ।

ನೀನೇ ಚಂದ್ರ ನೀನೇ ಸೂರ್ಯ ಎನ್ನುವರು
ಆಪತ್ತು ಬಂದಾಗ ದೂರದೂರ ಸರಿವರು
ಹೆಜ್ಜೆ ಇಡುವಾಗ ಹತ್ತಾರು ಸಲ ಯೋಚಿಸು
ಕಲ್ಲು ಮುಳ್ಳು ಇರದ ದಾರಿಯಲಿ ನಡೆ
ಸೊಗಸು।

– ಚಂದ್ರಶೇಖರಯ್ಯ ರೋಣದಮಠ

## ಬೇಗನೆ ಬಾರೋ ಬಸವಣ್ಣ ??

ಬಾರೋ ಬಾರೋ ಬಸವಣ್ಣ
ಭವದಲ್ಲಿ ಜನಿಸಿ ಬಾರಣ್ಣ
ಕಲಿಯುಗದಾಟವ ನೀನು
ನೋಡು
ಕಂಗಳು ಮಂಕು ಆಗುತಿವೆ......1

ಕೋಟಿ ಕೋಟಿ ಹಣವನ್ನುಗಳಿಸಿ
ಕುಬೇರರ ಪಟ್ಟವ ಪಡೆದಿಹರು.
ನೋಟಿನ ಮೇಲೆ ಮಲಗಿಕೊಂಡು
ಬ್ರಾಂಡಿ ಬಿಸ್ಕಿ ಕುಡಿಯುವರು......2

ಅಂತರಂಗದ ಅರಿವೇ ಇಲ್ಲ
ಧರ್ಮದದಾರಿಗೊತ್ತೇಇಲ್ಲ.
ಸುತ್ತಲುಅವರೇತುಂಬಿಹರು
ಕತ್ತಲು ಜೀವನ ಕಳೆಯುವರು.3

ಕಟ್ಟಿದೆ ನೀನು ಅಂದು ಕಲ್ಯಾಣ
ಮಂಟಪ ಅಲ್ಲಮಪ್ರಭುವಿನ
ಅಮೃತವಚನ ಭಕ್ತಿಯ ದೀಪ
ಹಚ್ಚಿದೆ ಜಗಕೆ ಬೆಳಕಾಗಿ.....4

ಲೋಕಕ್ಕೆ ಹರಡೈತೆ ನಿನ್ನ ಡಂಗುರ
ಪ್ರೀತಿಲೇ ಅರಿತರೆ ಅವರೇ ಶರಣ
ಶರಣೆಂದು ನಮಿಸುವೆ ನಿನ್ನ ಪಾದಕ್ಕೆ
ಕರುಣೆಯತೂರು ಬಸವೇಶನೆ....??????

– ಎಸ್. ಎಸ್. ಮುದ್ಲಾಪುರ ಕೊಪ್ಪಳ

## ಅಂತರಂಗ

ಆಧುನಿಕತೆಯಲಿ ಬದಲಾಗುತ್ತಿದೆ ಜೀವನದ
ಅಂತರಂಗ
ತಾಂಡವಾಡುತಿದೆ ದ್ವೇಷ ಅಸೂಯೆಯ
ಮೃದಂಗ
ಆಸೆ ಮೋಹದ ಬಲೆಯಲಿ ಸಿಲುಕಿದ್ದಾನೆ
ಮನುಷ್ಯ
ಮನುಷ್ಯತ್ವ ಮರೆತರೆ ಭಯಾನಕ ಭವಿಷ್ಯ

ಅಂತರಂಗ ಶುದ್ಧವಿದ್ದರೆ ಮೋಕ್ಷಕ್ಕೆ ದಾರಿಯು
ಭಗವಂತನೊಲುಮೆಗೆ ಅಗತ್ಯ ಬಹಿರಂಗ
ಶುದ್ದಿಯು
ಪರಿಶುದ್ಧ ಭಕ್ತಿಯು ಆತ್ಮಶುದ್ಧಿಗೆ ಕಾರಣವು
ಸದ್ವಿಚಾರದ ಚಿಂತನೆ ಮನಶುದ್ಧಿಯ
ಸಾಧನವು

ಆದಿ ಅಂತ್ಯವಿಲ್ಲದ ಅಗಾಧ ವಿಶ್ವದ ಹರವು
ಅರಿಯಲು ಅಸಾಧ್ಯ ಮನುಜರ
ಅಂತರಂಗವು
ಶಿವ ಶಕ್ತಿಯ ಲೀಲರೂಪ ಈ ಜಗತ್ತು
ಆತನಲ್ಲಿ ಶರಣಾದರೆ ತಿಳಿದೀತು ಈ ಮಹತ್ತು

– ಚೇತನ ಭಾರ್ಗವ ಬೆಂಗಳೂರು

# ದುರ್ಬಲರಿಗೆ ಚೈತನ್ಯ ತಂದ ಗ್ಯಾರಂಟಿ ಯೋಜನೆ

### ಸಿಂಗನಾಳದಲ್ಲಿ ಶ್ರೀ ಗಾದಿಲಿಂಗೇಶ್ವರ ಸಮುದಾಯ ಭವನ ನಿರ್ಮಾಣಕ್ಕೆ ಅಡಿಗಲ್ಲು: ಸಚಿವ ತಂಗಡಗಿ ಹೇಳಿಕೆ

**ಹಂಪಿ ಟೈಮ್ಸ್ ಕೊಪ್ಪಳ**



ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಸಿಂಗನಾಳ ಗ್ರಾಮದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಶ್ರೀ ಗಾದಿಲಿಂಗೇಶ್ವರ ಸಮುದಾಯ ಭವನ ನಿರ್ಮಾಣ ಕಾಮಗಾರಿಯ ಅಡಿಗಲ್ಲು ಸಮಾರಂಭಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಮಂಗಳವಾರ ಚಾಲನೆ ನೀಡಿದರು.

ಬಳಿಕ ಸಚಿವರು ಮಾತನಾಡಿ, ಆರ್ಥಿಕವಾಗಿ ದುರ್ಬಲರಾದವರಿಗೆ ಗ್ಯಾರಂಟಿ ಯೋಜನೆಗಳಿಂದ ಸಾಕಷ್ಟು ಅನುಕೂಲವಾಗುತ್ತಿದೆ. ರಾಜ್ಯ ಸರ್ಕಾರವು ಜಾರಿಗೆ ತಂದ ಯೋಜನೆಗಳು ಜನತೆಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಮೇಲೆ ಬರಲು ಸಾಧ್ಯವಾಗಿದೆ. ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದ ಕೀರ್ತಿ ನಮ್ಮ ಸರ್ಕಾರಕ್ಕೆ ಸಲ್ಲುತ್ತದೆ. ಸಿಂಗನಾಳ ಗ್ರಾಮದಲ್ಲಿ ನಿರ್ಮಿಸಲಾಗುತ್ತಿರುವ ಶ್ರೀ ಗಾದಿಲಿಂಗೇಶ್ವರ ಸಮುದಾಯ ಭವನದಿಂದ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗಲಿದ್ದು, ಈ ಕಾಮಗಾರಿಯನ್ನು ಉತ್ತಮ ಗುಣಮಟ್ಟದಲ್ಲಿ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇದಕ್ಕೂ ಮೊದಲು ಸಚಿವರು ಕನಕಗಿರಿ ವಿಧಾನಸಭಾ ಕ್ಷೇತ್ರದ ಕಾರಟಗಿ ತಾಲ್ಲೂಕಿನ ಮರಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಸಾರ್ವಜನಿಕರ ಕೊಂದು ಕೊರತೆ ಆಲಿಸಿದರು. ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ್, ಮುಖಂಡರಾದ ಶರಣೇಗೌಡ, ನಿರಲೂಟಿ ಸಿದ್ಧಪ್ಪ, ಬಸವರಾಜ್ ನಿರ್ಗಂಟಿ ಸೇರಿದಂತೆ ಮತ್ತಿತರರಿದ್ದರು.

# ಹಿರೇಸಿಂದೋಗಿ : ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರೇಸಿಂದೋಗಿಯ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜಿನಲ್ಲಿ ಖಾಲಿ ಇರುವ ಆಂಗ್ಲಭಾಷಾ ವಿಷಯದ ಬೋಧನೆಗೆ ಅತಿಥಿ ಉಪನ್ಯಾಸಕರ ಹುದ್ದೆಗೆ ಆಸಕ್ತ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಅಭ್ಯರ್ಥಿಗಳು ಎಂ.ಎ.ಬಿ.ಎಡ್ ವಿದ್ಯಾರ್ಹತೆ ಹೊಂದಿರಬೇಕು. ಅಭ್ಯರ್ಥಿಯನ್ನು ವಿದ್ಯಾರ್ಥಿಗಳು ಹಾಕುವ ಮತಗಳಿಂದ ಆಯ್ಕೆ ಮಾಡಲಾಗುವುದು (ಮಾದರಿ ಪಾಠ ಬೋಧನೆ ಆಧಾರದ ಮೇಲೆ). ನೇರವಾಗಿ ವಸತಿ ಕಾಲೇಜಿನಲ್ಲಿ ಅರ್ಜಿ ಪಡೆದು ಸಂಬಂಧಿಸಿದ ವಿದ್ಯಾರ್ಹತೆಯ ಎಲ್ಲಾ ದಾಖಲೆಗಳನ್ನು ಲಗತ್ತಿಸಿ ಸಲ್ಲಿಸಬೇಕು. ಆಯ್ಕೆಯಾದ ಅಭ್ಯರ್ಥಿಗೆ ಕವಶಿಸ ಸಂಘ ಬೆಂಗಳೂರು ರವರು ನಿಗದಿಪಡಿಸಿರುವ ವೇತನ ನೀಡಲಾಗುವುದು.

ಅರ್ಜಿ ಸಲ್ಲಿಸಲು ಜುಲೈ 02 ಕೊನೆಯ ದಿನವಾಗಿದೆ. ಜುಲೈ 03 ರಂದು ಮಾದರಿ ಪಾಠ ಬೋಧನಾ ಪ್ರಕ್ರಿಯೆ ನಡೆಸಲಾಗುವುದು. ಮಾದರಿ ಪಾಠ ಬೋಧನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಟಿಎ ಮತ್ತು ಡಿಎ ನೀಡಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಶರಣಗೌಡ, ಪ್ರಾಂಶುಪಾಲರು, ಮೊದೇಪಪೂವವಿಕಾ ಹಿರೇಸಿಂದೋಗಿ:7411999371, ಪರಶುರಾಮ ಬಿ ದ್ವಿ.ದ.ಸಹಾಯಕ: 9019531301 ಇವರನ್ನು ಸಂಪರ್ಕಿಸಬಹುದು ಎಂದು ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿಸಿಗೆ ನೂರೊಂದು ಅಹವಾಲು ಸಲ್ಲಿಕೆ

**ಮೊದಲ ಪುಟದಿಂದ**

ತಾಲೂಕು ಪಂಚಾಯತ್, ಸಿಡಿಪಿಒ ಕಚೇರಿ, ಮೀನುಗಾರಿಕೆ ಇಲಾಖೆ, ಪ್ರಾದೇಶಿಕ ಸಾರಿಗೆ ಇಲಾಖೆ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆ, ಪುರಸಭೆ ಕಾರ್ಯಾಲಯ, ಸಾರಿಗೆ ಇಲಾಖೆ, ಅಬಕಾರಿ ಇಲಾಖೆ, ಪಶುಪಾಲನಾ ಇಲಾಖೆ, ಸರ್ವೆ ಇಲಾಖೆ, ಕೆಆರ್‌ಐಡಿಎಲ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯಕ್ರಮದಲ್ಲಿ ಹಾಜರಿದ್ದು ಕಾರ್ಯಕ್ರಮದ ಸ್ಥಳದಲ್ಲಿ ಟೇಬಲ್ ಅಳವಡಿಸಿ ಸಾಲಾಗಿ ಕುಳಿತು ಅರ್ಜಿ ಸ್ವೀಕರಿಸಿದರು.

**ಯೋಜನೆಗಳ ಮಾಹಿತಿ:** ತಾಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಪಶುಪಾಲನಾ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಯು ಅರ್ಜಿ ಸ್ವೀಕರಿಸುವುದರ ಜೊತೆಗೆ ತಮ್ಮ ತಮ್ಮ ಇಲಾಖೆಯ ವಿವಿಧ ಯೋಜನೆಗಳ ಮಾಹಿತಿಯನ್ನು ಪ್ರದರ್ಶಿಸಿ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

**ವಿವಿಧೆಡೆ ಭೇಟಿ:** ಜನಸ್ಪಂದನ ಕಾರ್ಯಕ್ರಮಕ್ಕಾಗಿ ಹೂವಿನಹಡಗಲಿಗೆ ಭೇಟಿ ನೀಡಿದ್ದ ವೇಳೆಯಲ್ಲಿ ಜಿಲ್ಲಾಧಿಕಾರಿಗಳು, ಹಡಗಲಿ ತಾಲೂಕಿನ ಮೀರಾಕೋರನಹಳ್ಳಿ ಗ್ರಾಮದ ಶರಣಬಸವೇಶ್ವರ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ ಕಂಪ್ಯೂಟರ್ ಲ್ಯಾಬ್ ಶಾಲೆ ಇತರೆ ಶಾಲಾ ಉನ್ನೀತೀಕರಣದ ಕಾಮಗಾರಿ ಪರಿಶೀಲಿಸಿದರು.

**ತ್ಯಾಜ್ಯ ಸಂಸ್ಕರಣ ಘಟಕಕ್ಕೆ ಭೇಟಿ:** ಜಿಲ್ಲಾಧಿಕಾರಿಗಳು, ಹೂವಿನಹಡಗಲಿ ಪಟ್ಟಣದಲ್ಲಿನ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಹ ಭೇಟಿ ನೀಡಿ ಘಟಕದ ಬಗ್ಗೆ ಮಾಹಿತಿ ಪಡೆದು ಪ್ರಶಂಸೆ ವ್ಯಕ್ತಪಡಿಸಿದರು. ಹಡಗಲಿ ಪುರಸಭೆಯಿಂದ ಪಟ್ಟಣದಲ್ಲಿ ಹಸಿ ಮತ್ತು ಒಣ ತ್ಯಾಜ್ಯ ಸಂಗ್ರಹಿಸಿ ಬೇರ್ಪಡಿಸಿ ವೈಜ್ಞಾನಿಕ ರೀತಿಯಲ್ಲಿ ಘನತ್ಯಾಜ್ಯ ಘಟಕವನ್ನು ನಿರ್ವಹಣೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದರು.

ಜನಸ್ಪಂದನ ಕಾರ್ಯಕ್ರಮದಲ್ಲಿ ಹೂವಿನ ಹಡಗಲಿಯ ಗ್ರೇಡ್ 1 ತಹಸೀಲ್ದಾರರಾದ ಮಲ್ಲಿಕಾರ್ಜುನ, ಪುರಸಭೆ ಮುಖ್ಯಾಧಿಕಾರಿ ಪಚ್ಚಿ ಮಲ್ಲೇಶ, ಸಿಡಿಪಿಒ ರಾಮನಗೌಡ್ರ, ಹೂವಿನ ಹಡಗಲಿ ಪಿಎಸ್‌ಐಗಳಾದ ವಾಸು ಬಿ.ಎಸ್, ವಿಜಯಕೃಷ್ಣ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಜೂ.28ಕ್ಕೆ ಮಿನಿ ಜಾಬ್‌ಫೇರ್

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಜೂನ್ 28 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 02 ಗಂಟೆಯವರೆಗೆ ಮಿನಿ ಜಾಬ್‌ಫೇರ್ ಆಯೋಜಿಸಲಾಗಿದೆ. ಈ ಮಿನಿ ಜಾಬ್ ಫೇರ್‌ನಲ್ಲಿ ಖಾಸಗಿ ಕಂಪನಿಗಳು ಭಾಗವಹಿಸಲಿದ್ದು, ತಮ್ಮಲ್ಲಿನ ಖಾಲಿ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಎಲ್ಲರಿಗೂ ಉಚಿತ ಪ್ರವೇಶವಿರುತ್ತದೆ.

ಪಿಯುಸಿ/ತತ್ಸಮಾನ, ಐಟಿಐ, ಡಿಪ್ಲೋಮಾ, ಯಾವುದೇ ಪದವಿ ಹೊಂದಿದ 18 ರಿಂದ 30 ವರ್ಷದವರೆಗಿನ ಅಭ್ಯರ್ಥಿಗಳನ್ನು ನೇರ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ನಿರುದ್ಯೋಗಿ ಯುವಕ ಮತ್ತು ಯುವತಿಯರು ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳು ಮತ್ತು ಆಧಾರ್ ಕಾರ್ಡಿನ ಪ್ರತಿ, ಬಯೋಡಾಟಾ ಹಾಗೂ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ಮಿನಿ ಜಾಬ್ ಫೇರ್‌ನಲ್ಲಿ ಭಾಗವಹಿಸಿ, ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

# ಜೂ.30 ರಂದು ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ 2024ರ ಪರೀಕ್ಷೆಯನ್ನು ಕೇಂದ್ರೀಕೃತ ದಾಖಲಾತಿ ಘಟಕ ಬೆಂಗಳೂರು ಇವರ ವತಿಯಿಂದ ಜೂ.30 ರಂದು ಮೊದಲ ಅಧಿವೇಶನ ಬೆಳಿಗ್ಗೆ 9.30 ರಿಂದ 12 ಗಂಟೆಯವರೆಗೆ 12 ಪರೀಕ್ಷಾ ಕೇಂದ್ರಗಳಲ್ಲಿ ಮತ್ತು ಎರಡನೇ ಅಧಿವೇಶನ ಮಧ್ಯಾಹ್ನ 2 ಗಂಟೆಯಿಂದ 4.30 ರವರೆಗೆ 18 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಬಿ.ಉಮಾದೇವಿ ಅವರು ತಿಳಿಸಿದ್ದಾರೆ.

ನಗರದಲ್ಲಿರುವ 18 ಪರೀಕ್ಷಾ ಕೇಂದ್ರಗಳಲ್ಲಿ ಮೊದಲ ಅಧಿವೇಶನದಲ್ಲಿ 3200 ಮತ್ತು ಎರಡನೇ ಅಧಿವೇಶನದಲ್ಲಿ 5240 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದು, ಪರೀಕ್ಷೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು https://schooleducation.karnataka.gov.in/cacell/kn ವೆಬ್‌ಸೈಟ್‌ನಲ್ಲಿ ಅರ್ಜಿ ಸಂಖ್ಯೆ ಮತ್ತು ಜನ್ಮ ದಿನಾಂಕ ನಮೂದಿಸುವುದರ ಮೂಲಕ ಪ್ರವೇಶ ಪತ್ರಗಳ ಡೌನ್‌ಲೋಡ್ ಮಾಡಿಕೊಳ್ಳಬಹುದು.

**ಸೂಚನೆಗಳು:** ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಪ್ರತಿ ಅಧಿವೇಶನದ ಪರೀಕ್ಷಾ ಪ್ರಾರಂಭದ ಅವಧಿಗಿಂತ ಒಂದು ಗಂಟೆ ಮುಂಚಿತವಾಗಿ ಹಾಜರಿರಬೇಕು. ಪರೀಕ್ಷೆ ಪತ್ರ ಇಲ್ಲದೇ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ. ಈ ಬಗ್ಗೆ ಯಾವುದೇ ವಿನಾಯಿತಿ ಇರುವುದಿಲ್ಲ. 18 ಪರೀಕ್ಷಾ ಕೇಂದ್ರಗಳಿಗೆ ಮುಖ್ಯ ಅಧೀಕ್ಷಕರು, ಮಾರ್ಗಾಧಿಕಾರಿಗಳು, ಸ್ಥಾನಿಕ ಜಾಗ್ರತಾ ದಳದ ಅಧಿಕಾರಿಗಳನ್ನು ಮತ್ತು ಮೊಬೈಲ್ ಸ್ವಾಧೀನ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಪ್ರತಿ ಕೊಠಡಿಯಲ್ಲಿ 20 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದು, ಪೂರ್ವ ಮುದ್ರಿತ ಓಎಂಆರ್ ನಲ್ಲಿ ಒಮ್ಮೆ ಬರೆದಿರುವುದನ್ನು ಪುನ: ಬದಲಾಯಿಸುವುದು, ತಿದ್ದುವುದು , ಬಿಳಿ ಫ್ಲ್ಯೂಯಿಡ್ ಬಳಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ. ಬಿಳಿ ಫ್ಲ್ಯೂಯಿಡ್ ಹಚ್ಚಿ ಉತ್ತರ ಬದಲಾಯಿಸಲು ಅವಕಾಶವಿಲ್ಲ. ಪರೀಕ್ಷೆಗೆ ಆಗಮಿಸುವ ಅಭ್ಯರ್ಥಿಗಳು ಮೊಬೈಲ್ ಫೋನ್, ಬ್ಲೂಟೂತ್ ಡಿವೈಸ್, ಪೇಜರ್, ವೈರ್‌ಲೆಸ್, ಕ್ಯಾಲ್ಕುಲೇಟರ್, ಮೊದಲಾದ ಎಲೆಕ್ಟ್ರಾನಿಕ್ ಉಪಕರಣಗಳು, ಸ್ಲೈಡ್ ರೂಲುಗಳು, ಮಾರ್ಕರ್‌ಗಳು, ಲಾಗ್ ಟೇಬಲ್‌ಗಳು, ವೈಟ್‌ಫ್ಲೂಯಿಡ್‌ಗಳು, ಬ್ಲೇಡು, ಇಂಕ್ ಎರೇಸರ್, ಬಿಳಿ ಫ್ಲೂಯಿಡ್, ಬೆಂಕಿ ಪೊಟ್ಟಣ, ಸಿಗರೇಟ್ ಲೈಟರ್ ಮುಂತಾದವುಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಲಾಗಿದೆ. ವಿಕಲಚೇತನ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಅಂಗವಿಕಲತೆಯ ಪ್ರಮಾಣ ಪತ್ರವನ್ನಾಧರಿಸಿ ಪರೀಕ್ಷೆ ಬರೆಯಲು ಒಂದು ಗಂಟೆಗೆ ಇಪ್ಪತ್ತು ನಿಮಿಷಗಳಂತೆ 50 ನಿಮಿಷ ಹೆಚ್ಚಿನ ಕಾಲಾವಕಾಶ ನೀಡಿದೆ.

ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಸಹಾಯಕ ಬರಹಗಾರರನ್ನು ಕೋರಿರುವವರು ಒಂದು(01) ದಿನ ಮುಂಚಿತವಾಗಿ ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನು ಭೇಟಿ ಮಾಡಿ ವಿವರವನ್ನು ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

# ವಿವಿಧ ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಕೇಂದ್ರ ಪುರಸ್ಕೃತ ದೀನದಯಾಳ್ ಅಂತ್ಯೋದಯ ಯೋಜನೆ (ಡೇ-ನಲ್ಮ್)ಯ ಸನ್ 2024-25ನೇ ಸಾಲಿನ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ ಕುಕನೂರು ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ವ್ಯಕ್ತಿಗತ ಉದ್ಯೋಗ ಹಾಗೂ ಗುಂಪು ಉದ್ದಿಮೆ ಸ್ಥಾಪಿಸಲು ಬಡ್ಡಿ ಸಹಾಯಧನದಡಿ ಸಾಲ ಸೌಲಭ್ಯ ಪಡೆಯಲಿಚ್ಛಿಸುವವರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಸ್ವಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯ, 12 ಸ್ವಸಹಾಯ ಗುಂಪು ರಚನೆ ಗುರಿ, ಸ್ವ ಸಹಾಯ ಗುಂಪುಗಳಿಗೆ (ಡೇ-ನಲ್ಮ್) ಸ್ವಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯ (ಕ್ರೆಡಿಟ್ ಲಿಂಕೇಜ್)ವನ್ನು ನೀಡಲಾಗುತ್ತದೆ. ಅರ್ಜಿ ಸಲ್ಲಿಸಲು ಜುಲೈ 12 ಕೊನೆಯ ದಿನವಾಗಿದ್ದು, 18 ರಿಂದ 45 ವರ್ಷದವರೆಗಿನ ಅರ್ಹ ಫಲಾನುಭವಿಗಳು ಚಾಲ್ತಿ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಿದ್ಯಾರ್ಹತೆ ಪ್ರಮಾಣ ಪತ್ರ, ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್, ಬಿ.ಪಿ.ಎಲ್. ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕದ ಝೆರಾಕ್ಸ ಪ್ರತಿ, ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 2 ಭಾವಚಿತ್ರಗಳನ್ನು ದ್ವಿಪ್ರತಿಯಲ್ಲಿ ಪಟ್ಟಣ ಪಂಚಾಯತಿ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು.



## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ | ಸಂವತ್ಸರ: ಕ್ರೋಧಿ

**26–06–2024 – ಬುಧವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಧನಿಷ್ಠ |
| ಯೋಗ | : ವಿಷ್ಕುಂಭ |
| ಕರಣ | : ಪ್ರೀತಿ |
| ಸೂರ್ಯೋದಯ | : 05:44:35 |
| ಸೂರ್ಯಾಸ್ತ | : 19:15:12 |
| ರಾಹು | : 12:30–14:11 |
| ಯಮಘಂಡ | : 07:26–09:07 |
| ಗುಳಿಕ | : 10:49–12:30 |

## ತುಂಗಭದ್ರಾ ನೀರಿನ ಮಟ್ಟ



**ಮಂಗಳವಾರ : 25–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1581.52 ಅಡಿ |
| ಒಳ ಹರಿವು | 815 ಕ್ಯುಸೆಕ್ |
| ಹೊರ ಹರಿವು | 2064 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.256 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1579.33 ಅಡಿ |
| ಒಳ ಹರಿವು | 272 ಕ್ಯುಸೆಕ್ |
| ಹೊರ ಹರಿವು | 377 ಕ್ಯುಸೆಕ್ |
| ಸಾಮರ್ಥ್ಯ | 4.154 ಟಿಎಂಸಿ |

# ಸಿಕ್ಕ ಸರ್ಕಾರಿ ನೌಕರಿಗೆ ನ್ಯಾಯ ಒದಗಿಸಿ ಅರ್ಪಣಾ ಮನೋಭಾವದಿಂದ ಕರ್ತವ್ಯ ನಿರ್ವಹಿಸಿ

### ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಸುಧಾರಣಾ ಕಾರ್ಯಾಗಾರದಲ್ಲಿ ಸಿಇಓ ಸದಾಶಿವ ಪ್ರಭು ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ಎಸ್ಎಸ್ಎಲ್ಸಿ ಪರೀಕ್ಷಾ ಫಲಿತಾಂಶ ಸುಧಾರಣಾ ಕಾರ್ಯಾಗಾರ ಹಗರಿಬೊಮ್ಮನಹಳ್ಳಿಯ ಗುರುಭವನದಲ್ಲಿ ಮಂಗಳವಾರ ನಡೆಯಿತು.

ಹಗರಿಬೊಮ್ಮನಹಳ್ಳಿ ಮತ್ತು ಹಡಗಲಿ ತಾಲೂಕಿನ ಎಲ್ಲಾ ಸರ್ಕಾರಿ ಅನುದಾನಿತ, ಅನುದಾನ ರಹಿತ ಪ್ರೌಢಶಾಲೆಗಳ ಮುಖ್ಯಾಧ್ಯಾಪಕರು, ಬಿಆರ್‌ಸಿ ಸಮನ್ವಯಾಧಿಕಾರಿಗಳು, ಶಿಕ್ಷಣ ಸಂಯೋಜಕರು ಹಾಗೂ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದ ಕಾರ್ಯಾಗಾರದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು, ಎಸ್ಸೆಸ್ಸೆಲ್ಸಿ ಫಲಿತಾಂಶ ಉತ್ತಮಪಡಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಮಾರ್ಗೋಪಾಯಗಳ ಬಗ್ಗೆ ಸುಧೀರ್ಘವಾಗಿ ವಿಶ್ಲೇಷಿಸಿದರು. ಬಳಿಕ ಶಿಕ್ಷಕರೊಂದಿಗೆ ಸಂವಾದ ನಡೆಸಿದರು.

ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಸಿಇಓ ಅವರು, ಸಮಾಜ, ಪೋಷಕರು, ಶಿಕ್ಷಕರು, ಇಲಾಖೆ ಸೇರಿದಂತೆ ಎಲ್ಲರೂ ಪರಸ್ಪರ ಸಾಂಘಿಕ ಪ್ರಯತ್ನದಿಂದ ಮುಂದಿನ ಬಾರಿಯ ಎಸ್ಎಸ್ಎಲ್ಸಿ ಪರೀಕ್ಷೆಯ ಫಲಿತಾಂಶವನ್ನು ಹೆಚ್ಚಿಸಲು ನಾವು ಪ್ರಯತ್ನಿಸಬೇಕಿದೆ ಎಂದರು.

ಜಿಲ್ಲೆಯಲ್ಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಿಸುವ ನಿಟ್ಟಿನಲ್ಲಿ ಇದು ಪ್ರಥಮ ಹೆಜ್ಜೆಯಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿಂದುಳಿಯುವಿಕೆಯಲ್ಲಿನ ಅಂಶಗಳನ್ನು ಗುರುತಿಸಿ ವಿದ್ಯಾರ್ಥಿಗಳು ಮತ್ತು ಪೋಷಕರೊಂದಿಗೆ ಒಂದು ಆತ್ಮೀಯ ಸಮಾಲೋಚನೆ ನಡೆಸಿ ವಿದ್ಯಾರ್ಥಿಯಲ್ಲಿನ ಕೀಳರಿಮೆ ಹೋಗಲಾಡಿಸಿ ಫಲಿತಾಂಶ ಹೆಚ್ಚಿಸಲು ಪೂರಕವಾದ ಅವಕಾಶವನ್ನು ಕಲ್ಪಿಸಬೇಕಿದೆ ಮತ್ತು ತರಗತಿಗಳಲ್ಲಿ ವಿದ್ಯಾರ್ಥಿ ಗುಂಪುಗಳನ್ನು ರಚಿಸಿ ಒಂದು ಆರೋಗ್ಯಕರ ಸಂವಾದ ಏರ್ಪಡಿಸಿ ಸ್ಪರ್ಧಾತ್ಮಕ ಮನೋಭಾವವನ್ನು ಮೂಡಿಸಿ, ಕಲಿಕೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿ ಫಲಿತಾಂಶ ಸುಧಾರಣೆಗೆ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಿದೆ ಎಂದು ಅವರು ಸಲಹೆ ಮಾಡಿದರು.

ನರೇಗಾ ಯೋಜನೆಯಡಿಯಲ್ಲಿ ವಿಜಯನಗರ ಜಿಲ್ಲೆಗೆ ಕಳೆದ ವರ್ಷ 73 ಲಕ್ಷ ಮಾನವ ದಿನಗಳ ಸೃಜನೆಯ ಗುರಿ ನೀಡಲಾಗಿತ್ತು. ಆದರೆ ನಮ್ಮ ಜಿಲ್ಲೆಯಲ್ಲಿ 78 ಲಕ್ಷ ಮಾನವ ದಿನಗಳನ್ನು ಸೃಜನ ಮಾಡಲಾಗಿದ್ದು ಆ ಮೂಲಕ ಗುಳೇ ಹಾಗೂ ವಲಸೆಯನ್ನು ತಡೆಗಟ್ಟಲು ಪ್ರಯತ್ನಿಸಲಾಗುತ್ತಿದೆ. ಅಂದರೆ ಇದು ಇಲ್ಲಿನ ಪೋಷಕರು ಆರ್ಥಿಕವಾಗಿ ಸಬಲರಾಗಿಲ್ಲದಿರುವ ಅಂಶವನ್ನು ಸೂಚಿಸುತ್ತದೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಉತ್ತಮ ಫಲಿತಾಂಶವನ್ನು ಸರ್ಕಾರಿ ಶಾಲೆಗಳು ನೀಡಿ, ಪೋಷಕರಲ್ಲಿ ಭರವಸೆ ಮೂಡಿಸಿ, ಮಗು ಉನ್ನತ ಶಿಕ್ಷಣ ಪಡೆದು ಆ ಮೂಲಕ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ಜವಾಬ್ದಾರಿ ನಮ್ಮದಾಗಿದೆ. ಆದಾಗ್ಯೂ ಪೋಷಕರು ಗುಳೇ ಹೋದಲ್ಲಿ ಅಂತಹ ಪೋಷಕರ ಮಕ್ಕಳನ್ನು ನಾವು ಅವರೊಟ್ಟಿಗೆ ಹೋಗಲು ಬಿಡದೆ ಅವರ ಮನವೊಲಿಸಿ ನಿರಂತರವಾಗಿ ಶಾಲೆಗೆ ಹಾಜರಾಗುವಂತೆ ನೋಡಿಕೊಳ್ಳಬೇಕು.

**ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಿ:** ಗುಣಮಟ್ಟದ ಫಲಿತಾಂಶ ನೀಡಲು ವೆಬ್ ಕಾಸ್ಟಿಂಗ್ ಮೂಲಕ ಪರೀಕ್ಷಾ ಕೇಂದ್ರದ ಪರಿವೀಕ್ಷಣೆಯ ವ್ಯವಸ್ಥೆ ಮಾಡಿರುವ ಸರ್ಕಾರದ ನಿರ್ಧಾರ ಸ್ವಾಗತಾರ್ಹವಾಗಿದೆ. ಈ ವ್ಯವಸ್ಥೆಯು ನಿರಂತರ ಮುಂದುವರೆಯಲಿದ್ದು, ಇದಕ್ಕೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹೊಂದಿಕೊಳ್ಳಲೇಬೇಕು. ಇದನ್ನು ಒಪ್ಪಿಕೊಂಡು ನಾವು ಫಲಿತಾಂಶ ಸುಧಾರಣೆಯನ್ನು ತರುವಲ್ಲಿ ಶ್ರಮಿಸಬೇಕಿದೆ ಎಂದು ಸಿಇಓ ಅವರು ಸಲಹೆ ಮಾಡಿದರು.

**ಗೈರುಹಾಜರಿ ತಡೆಯಿರಿ:** ಗೈರು ಹಾಜರಿಯನ್ನು ತಡೆಯುವ ನಿಟ್ಟಿನಲ್ಲಿ ಮಗುವಿನ ಒಂದು ದಿನದ ಗೈರು ಹಾಜರಿಯನ್ನು ಸಹ ನಾವು ಗಂಭೀರವಾಗಿ ಪರಿಗಣಿಸಿ ಪೋಷಕರ ಮನವೊಲಿಸಿ ವಿದ್ಯಾರ್ಥಿಗಳನ್ನು ನಿರಂತರವಾಗಿ ಶಾಲೆಗೆ ಕಳಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ, ಎಸ್‌ಡಿಎಂಸಿಯ ಸಹಕಾರ ಪಡೆಯಬೇಕಿದೆ. ಎಲ್ಲದಕ್ಕಿಂತ ಮುಖ್ಯವಾಗಿ ಮಗು ನನ್ನ ಶಾಲೆಯ ಆಸ್ತಿ, ಇದು ನಮ್ಮ ಶಾಲೆ ಎನ್ನುವ ಮನಸ್ಥಿತಿಯನ್ನು ನಾವು ತಂದುಕೊಂಡು ಆ ಮೂಲಕ ಫಲಿತಾಂಶ ಸುಧಾರಣೆಗೆ ಪ್ರಥಮ ಹೆಜ್ಜೆಯನ್ನು ಇಡಬೇಕಾಗಿದೆ ಎಂದು ಸಿಇಓ ಅವರು ಸಲಹೆ ಮಾಡಿದರು.

**ಅರ್ಪಣಾ ಮನೋಭಾವವಿರಲಿ:** ದೇಶದಲ್ಲಿನ ನಿರುದ್ಯೋಗಕ್ಕೆ ಹೋಲಿಸಿದಾಗ ಉದ್ಯೋಗಿಗಳ ಅದರಲ್ಲೂ ಖಾಯಂ ಉದ್ಯೋಗಿಗಳ ಸಂಖ್ಯೆ ಕಡಿಮೆ ಇದೆ. ಸುಯೋಗದಿಂದ ನಮಗೆ ದೊರೆತ ಸರ್ಕಾರಿ ನೌಕರಿಗೆ ನಾವು ನ್ಯಾಯ ಒದಗಿಸಿ ಅರ್ಪಣಾ ಮನೋಭಾವದಿಂದ ಕರ್ತವ್ಯ ನಿರ್ವಹಿಸುವಂತೆ ಸಿಇಓ ಅವರು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ವಿಜಯನಗರ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ(ಆಡಳಿತ) ಹನುಮಕ್ಕ, ಹಗರಿಬೊಮ್ಮನಹಳ್ಳಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮೈಲೇಶ್ ಬೇವೂರು, ಹಡಗಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮಹೇಶ್ ಪೂಜಾರ್, ಅಕ್ಷರ ದಾಸೋಹದ ಶಿಕ್ಷಣಾಧಿಕಾರಿಗಳಾದ ಶೇಖರಪ್ಪ ಹೊರಪೇಟೆ ಇದ್ದರು.

## ಬೆಳಕಿನ ಹಾದಿ

# ಸಂಸ್ಕಾರದ ಮಂತ್ರ ಕಲಿಸೋಣ

**ಜಯಶ್ರೀ.ಎಂ. ಕರ್ಜಗಿ. ಹುಬ್ಬಳ್ಳಿ**



ಒಮ್ಮೆ ಗುರುನಾಥರಲ್ಲಿ ಓರ್ವ ವೃದ್ಧರು ತಮ್ಮ ಕಷ್ಟವನ್ನು ಹೇಳಿಕೊಳ್ಳುತ್ತಾ, 'ನನ್ನ ಮಗ ಅಮೇರಿಕಾದಲ್ಲಿ ನೆಲೆಸಿರುವನು. ವಯಸ್ಸಾದ ನಾವು ಅನಾರೋಗ್ಯದಿಂದ ಬಳಲುತ್ತಿದ್ದೇವೆ. ನನ್ನ ಹೆಂಡತಿಗಂತೂ ಕೀಲು ಮತ್ತು ಮೂಳೆ ನೋವು, ಓಡಾಡಲು ಕಷ್ಟವಾಗಿ ಹಾಸಿಗೆ ಹಿಡಿದಿದ್ದಾಳೆ. ನನ್ನ ಆರೋಗ್ಯ ಅಷ್ಟೊಂದು ಸರಿ ಇಲ್ಲ. ನಮ್ಮನ್ನು ನೋಡಿಕೊಳ್ಳುವವರು ಯಾರೂ ಇಲ್ಲ. ನಮ್ಮ ಮಗ ವಾಪಾಸು ಬಂದು ನಮ್ಮ ಜೊತೆ ಉಳಿದರೆ ವಯಸ್ಸಾದ ನಮಗೆ ಬಹಳ ಉಪಕಾರವಾಗುತ್ತದೆ. ಮಗನಿಗೆ ಇಲ್ಲೆ ಇರುವ ಮನಸ್ಸು ಬರುವಂತೆ ಮಾಡಬೇಕು' ಎಂದು ಬೇಡಿಕೊಂಡರು.



ಸುಮ್ಮನೆ ಎಲ್ಲವನ್ನೂ ಕೇಳಿಸಿಕೊಂಡ ಗುರುಗಳು 'ಇದರಲ್ಲಿ ನಿಮ್ಮ ಮಗನದೇನು ತಪ್ಪಿಲ್ಲವಲ್ಲ. ನಿಮ್ಮ ಆಸೆಯಂತೆ ಅಮೇರಿಕಾಕ್ಕೆ ಹೋಗಿದ್ದಾನೆ ಅಷ್ಟೇ. ಇರಲು ಮನೆ, ಹಣ ಎಲ್ಲವೂ ಇದೆಯಲ್ಲ. ಅನ್ಯಾಕೆ ಬೇಕು?' ಎಂದರು. ಸ್ವಲ್ಪ ಗಲಿಬಿಲಿಗೊಂಡ ವೃದ್ಧರು ಅರ್ಥವಾಗದಂತೆ ಕಣ್ಣು ಕಣ್ಣು ಬಿಡುತ್ತಾ ನಿಂತರು. 'ನಿಮ್ಮ ಮಗನಿಗೆ ಚೆನ್ನಾಗಿ ಓದಿ ದೊಡ್ಡ ಕೆಲಸ ಮಾಡಿ ದುಡ್ಡು ಸಂಪಾದನೆ ಮಾಡಲು ಅಮೇರಿಕಾಕ್ಕೆ ಹೋಗಲು ಹೇಳಿದವರು ನೀವೇ ಅಲ್ಲವೇ?' ಎಂದರು ಗುರುಗಳು.

ಮುಂದುವರೆದು 'ಈಗ ನಿಮ್ಮ ಮಗ ನೀವು ಹೇಳಿದ್ದನ್ನು ಪಾಲಿಸುತ್ತಿದ್ದಾನೆ ತಪ್ಪೇನಿದೆ? ನೀವು ವಯಸ್ಸಾದ ತಂದೆ ತಾಯಿಯರನ್ನು ವೃದ್ಧ್ಯಾಪ್ಯದಲ್ಲಿ ನೋಡಿಕೊಳ್ಳಬೇಕು, ಗುರುಹಿರಿಯರ ಸೇವೆ ಮಾಡಬೇಕು ಎಂದು ಯಾವತ್ತೂ ಹೇಳಿಕೊಡಲಿಲ್ಲ. ವಾಸ್ತ ಹೀಗಿರಬೇಕಾದರೆ ನಿಮ್ಮ ಮಗ ಅದನ್ನು ಕಲಿಯುವುದಾಗಲೀ. ಅನುಸರಿಸುವುದಾಗಲೀ ಹೇಗೆ ಅಲ್ಲವೇ? ನೀವು ಹೇಳಿದ ಹಾಗೆ ಮಾಡುತ್ತಿದ್ದಾನೆ, ಮಾಡಲಿ ಬಿಡಿ. ಈಗ ಯಾವ ಮಂತ್ರ–ತಂತ್ರಗಳು ಅವನ ಮನಸ್ಸು ಬದಲಾಯಿಸಲು ಸಾಧ್ಯವಿಲ್ಲ. ಅವನು ಮನಸ್ಸು ಬದಲಾಯಿಸಲು ದೇವರು ಬುದ್ಧಿ ಕೊಟ್ಟರೂ ಕೊಡಬಹುದು' ಎಂದು ಹೇಳಿದರು.

ಇಲ್ಲಿ ನಾವೆಲ್ಲ ತಿಳಿದುಕೊಳ್ಳಬೇಕಾದ ವಿಚಾರೇನೆಂದರೆ ನಮ್ಮ ಮಕ್ಕಳಿಗೆ ಯಾವುದನ್ನು ಹೇಳಬೇಕು, ಹಿರಿಯರ ಸೇವೆ ಮಾಡಬೇಕು ಎನ್ನುವುದನ್ನು ನಾವೇ ಕಲಿಸಬೇಕು. ಎಳೆಯ ವಯಸ್ಸಿನಲ್ಲಿ ನೋಡಿ ಕಲಿತ ವಿಚಾರಗಳು ಮನಸ್ಸಿನ ಆಳದಲ್ಲಿ ಗಟ್ಟಿಯಾಗಿ ಉಳಿಯುತ್ತವೆ. ಇಷ್ಟರ ಮೇಲೂ ಮಕ್ಕಳು ಅಪ್ಪ–ಅಮ್ಮ, ಗುರು–ಹಿರಿಯರ ಸೇವೆಯಲ್ಲಿ ವೃದ್ಧ್ಯಾಪ್ಯದಲ್ಲಿ ನಿರ್ವಹಿಸಲಿಲ್ಲ ಎಂದರೆ ಅದು ಅವರವರ ಪ್ರಾರಬ್ಧದ ಕರ್ಮವೆಂದು ಹೇಳಬೇಕಾಗುತ್ತದೆ. ಎಳೆಯ ವಯಸ್ಸಿನಲ್ಲಿ ಮಕ್ಕಳಿಗೆ ಸಂಸ್ಕಾರ ಕಲಿಸಿಕೊಡಬೇಕಾದದ್ದು ಪಾಲಕರ ಕರ್ತವ್ಯ. ಅಲ್ಲವೇ?

# ಇಂದು ಅಂತಾರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ, ಕಳ್ಳ ಸಾಗಾಣಿಕೆ ವಿರೋಧಿ ಸಪ್ತಾಹ ದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಚೇರಿ, ಪೊಲೀಸ್ ಇಲಾಖೆ, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ, ಸಪ್ತಗಿರಿ ಗ್ರೂಪ್ ಆಫ್ ಇನ್ಸಿಟೂಷನ್ ನರ್ಸಿಂಗ್ ಕಾಲೇಜ್, ಮಲ್ಲಿಗೆ ಪ್ಯಾರಾಮೆಡಿಕಲ್ ಕಾಲೇಜ್, ದೀಪಾಲಿ ಪ್ಯಾರಾಮೆಡಿಕಲ್ ಮತ್ತು ನರ್ಸಿಂಗ್ ಕಾಲೇಜ್, ವಿಜಯನಗರ ಮಹಾವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ಜೂ.26ರಂದು ಅಂತಾರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ಮತ್ತು ಕಳ್ಳ ಸಾಗಾಣಿಕೆ ವಿರೋಧಿ ಸಪ್ತಾಹ ದಿನಾಚರಣೆ ಹಾಗೂ ಜನ ಜಾಗೃತಿ ಜಾಥಾ ಕಾರ್ಯಕ್ರಮವು ವಿಜಯನಗರ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣದಲ್ಲಿ ಜೂನ್ 26ರಂದು ಬೆಳಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಜಾಥಾಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಬಿ.ಎಲ್. ಶ್ರೀಹರಿಬಾಬು ಅವರು ಚಾಲನೆ ನೀಡುವರು. ಮುಖ್ಯ ಅತಿಥಿಗಳಾಗಿ ಹೊಸಪೇಟೆಯ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಕುಮಾರಿ ಮಾನಸ ಅಕ್ಕ ಅವರು ಆಗಮಿಸುವರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಶಂಕರ್ ನಾಯ್ಕ್ ಎಲ್ ಅಧ್ಯಕ್ಷತೆ ವಹಿಸುವರು.

# ಕೆಂಪೇಗೌಡರ ಜಯಂತಿ

ಮೊದಲ ಪುಟದಿಂದ

ಕನ್ನಡ ಮತ್ತು ಸಂಸ್ಕೃತ ಇಲಾಖೆಯವರು ಕ್ರಮವಹಿಸಬೇಕು ಎಂದು ಸೂಚನೆ ನೀಡಿದರು. ಜಯಂತಿಯನ್ನು ಸರ್ಕಾರಿ, ಅರೆ ಸರ್ಕಾರಿ ಕಚೇರಿಗಳಲ್ಲಿ ಆಚರಿಸಬೇಕು. ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಸಂಘ ಸಂಸ್ಥೆಗಳ ಮುಖಂಡರು ಜಯಂತ್ಯುತ್ಸವದಲ್ಲಿ ಭಾಗವಹಿಸಬೇಕು ಎಂದು ಕೋರಿದರು. ಎಲ್ಲಾ ಕಡೆಗಳಲ್ಲಿ ಜಯಂತಿಯನ್ನು ಆಚರಣೆ ಮಾಡಬೇಕು. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಕಡ್ಡಾಯ ಕೆಂಪೇಗೌಡರ ಜಯಂತಿಯನ್ನು ವಿಶೇಷವಾಗಿ ಆಚರಣೆ ಮಾಡಲು ಬಿಬಿಎಂಪಿಯಿಂದ 1 ಲಕ್ಷ ಅನುದಾನ ಬಿಡುಗಡೆ ಆಗಲಿದೆ ಅದರಂತೆ ಸದರಿ ಜಯಂತಿ ಆಚರಣೆಗೆ ಕ್ರಮವಹಿಸಬೇಕು ಎಂದು ಎಲ್ಲ ತಹಸೀಲ್ದಾರಗಳಿಗೆ ನಿರ್ದೇಶನ ನೀಡಿದರು.

ವಿಡಿಯೋ ಸಂವಾದದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ಧಲಿಂಗೇಶ ರಂಗಣ್ಣನವರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ಅಪಘಾತ ತಡೆ, ಮದ್ಯಪಾನ ಮಾಡಿ ವಾಹನ ಚಾಲಯಿಸಿದವರ ಮೇಲೆ ಕ್ರಮ

### ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜೀತ್ ಕುಮಾರ್ ಬಂಡಾರು ಸುದ್ದಿಗೋಷ್ಠಿಯಲ್ಲಿ ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ**



ಜಿಲ್ಲೆಯಲ್ಲಿ ಸಂಚಾರಿ ನಿಯಮ ಉಲ್ಲಂಘನೆ, ಅಪಘಾತ ನಿಯಂತ್ರಣ ಮತ್ತು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ಮೇಲೆ ಕ್ರಮ ಜರುಗಿಸಲು ಜಿಲ್ಲಾ ಪೊಲೀಸ್ ಇಲಾಖೆಯು ಆಧುನಿಕ ತಂತ್ರಜ್ಞಾನ ಸಾಧನಗಳನ್ನು ಬಳಸಿ ನಿಗಾವಹಿಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜೀತ್ ಕುಮಾರ್ ಬಂಡಾರು ಅವರು ಹೇಳಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಮಂಗಳವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಪ್ರಸ್ತಕ ವರ್ಷದಿಂದ ಇಲ್ಲಿಯವರೆಗೆ ಸುಮಾರು 300 ರಸ್ತೆ ಅಪಘಾತಗಳು ಸಂಭವಿಸಿದ್ದು, 118 ಜನ ಮೃತಪಟ್ಟಿದ್ದಾರೆ. 436 ಗಂಭೀರ ಸ್ವರೂಪದ ಗಾಯಗಳಾಗಿವೆ. ಹಾಗಾಗಿ ಜಿಲ್ಲೆಯಲ್ಲಿ ರಸ್ತೆ ಅಪಘಾತ ನಿಯಂತ್ರಿಸಲು, ಸಂಚಾರ ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ಬಳಕೆ ಮಾಡಲಾಗುವುದು ಎಂದು ತಿಳಿಸಿದರು.

ಸಂಚಾರಿ ನಿಯಮ ಉಲ್ಲಂಘನೆಗೆ ಸ್ಪೀಡ್ ಲೇಸರ್ ಗನ್ ಮತ್ತು ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ವಿರುದ್ಧ ಕ್ರಮ ಕೈಗೊಳ್ಳಲು ಬ್ರೀಥ್ ಅಲ್ಕೋಹಾಲ್ ಅನಲೈಜರ್ ಸಾಧನಗಳು ಸಿಟಿಆರ್‌ಎಸ್ ಕಚೇರಿಯಿಂದ ಸರಬರಾಜು ಆಗಿದ್ದು, ಇವುಗಳ ಬಗ್ಗೆ ಈಗಾಗಲೇ ಎಲ್ಲಾ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.

ಸ್ಪೀಡ್ ಲೇಸರ್ ಗನ್:

ಸ್ಪೀಡ್ ಲೇಸರ್ ಗನ್ ಉಪಕರಣವು ಸಂಪೂರ್ಣ ಡಿಜಿಟಲ್ ಆಗಿದ್ದು, ಇದರಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಲಾಗಿದೆ. ಸಂಚಾರಿ ನಿಯಮ ಉಲ್ಲಂಘನೆಯಾದಲ್ಲಿ ಅಂದಿನ ದಿನಾಂಕ, ಫ್ರಿಂಟ್ ದಿನಾಂಕ, ಸೌಂಡ್ ಡೆಸಿಬಲ್ ಮಾಹಿತಿ, ಸ್ಥಳ ಹಾಗೂ ವಾಹನದ ನೋಂದಣಿ ಸಂಖ್ಯೆ ಸೇರಿ ಸ್ವಯಂಚಾಲಿತವಾಗಿ ಈ ಉಪಕರಣವು ರೆಕಾರ್ಡ್ ಮಾಡಿಕೊಳ್ಳುತ್ತದೆ ಎಂದು ಹೇಳಿದರು.

ಈ ಉಪಕರಣವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕೊಂಡೊಯ್ಯಬಹುದಾದ ಸಾಧನವಾಗಿದ್ದು, ಅಪಾಯಕಾರಿ ಚಾಲನೆ, ಅತಿ ವೇಗ, ಚಾಲನೆ ಮಾಡುವಾಗ ಮೊಬೈಲ್ ಬಳಕೆ, ವೀಲಿಂಗ್ ಮತ್ತು ರೇಸಿಂಗ್, ಹೆಲ್ಮೆಟ್ ಧರಿಸದೇ ವಾಹನ ಚಾಲನೆ, ದ್ವಿ–ಚಕ್ರ ವಾಹನದಲ್ಲಿ ಇಬ್ಬರಿಗಿಂತ ಹೆಚ್ಚು ಸವಾರರ ಚಾಲನೆ, ಸಿಗ್ನಲ್ ಜಂಪಿಗ್ ಮತ್ತು ಮಾದಕ ದ್ರವ್ಯದ ಅಮಲಿನಲ್ಲಿ ವಾಹನ ಚಾಲನೆ ಸೇರಿದಂತೆ ಇನ್ನು ಮುಂತಾದ ಸಂಚಾರ ನಿಯಮ ಉಲ್ಲಂಘನೆ ಗುರುತಿಸಿ ಪ್ರಕರಣ ದಾಖಲಿಸಬಹುದಾಗಿದೆ ಎಂದು ಅವರು ತಿಳಿಸಿದರು.

ವಾಹನ ಸವಾರರು ಅನಾವಶ್ಯಕವಾಗಿ ಪೊಲೀಸರೊಂದಿಗೆ ವಾಗ್ವಾದ ಮಾಡುವುದನ್ನು ತಪ್ಪಿಸಲು ಹಾಗೂ ಸಂಚಾರಿ ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಸಾಕ್ಷ್ಯಧಾರಗಳನ್ನು ಸಂಗ್ರಹಿಸುತ್ತದೆ ಎಂದರು.

ಜಿಲ್ಲಾ ಪೊಲೀಸ್ ಇಲಾಖೆಯು ರಸ್ತೆ ಸುರಕ್ಷತೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದ್ದು, ಸಾರ್ವಜನಿಕರು ಕಡ್ಡಾಯವಾಗಿ ಸಂಚಾರ ನಿಯಮ ಪಾಲಿಸಬೇಕು. ವಾಹನ ಚಾಲನೆ ಮಾಡುವಾಗ ಸುರಕ್ಷತೆಗಾಗಿ ಹೆಲ್ಮೆಟ್ ಮತ್ತು ಸೀಟ್ ಬೆಲ್ಟ್ ತಪ್ಪದೇ ಧರಿಸಬೇಕು ಎಂದು ತಿಳಿಸಿದರು.

ಬ್ರೀಥ್ ಅಲ್ಕೋಹಾಲ್ ಅನಲೈಜರ್:

ಜಿಲ್ಲೆಯಲ್ಲಿ ಮದ್ಯ ಸೇವನೆ ಮಾಡಿ ವಾಹನ ಚಲಾಯಿಸುವವರ ವಿರುದ್ಧ ಪ್ರಕರಣ ದಾಖಲಿಸಲು ಬ್ರೀಥ್ ಅಲ್ಕೋಹಾಲ್ ಅನಲೈಜರ್ ಡಿಜಿಟಲ್ ಉಪಕರಣವನ್ನು ಬಳಸಲಾಗುತ್ತಿದ್ದು, ಮದ್ಯ ಸೇವನೆ ಮಾಡಿದ ವ್ಯಕ್ತಿಯ ಭಾವಚಿತ್ರದ ಸಮೇತ ಮಾಹಿತಿ ದಾಖಲಾಗುತ್ತದೆ. ಈ ಉಪಕರಣವನ್ನು ಊದಿಸುವುದರ ಮೂಲಕ, ವಾಸನೆ ಮೂಲಕ ಮತ್ತು ನಿರಾಕರಿಸಿದಾಗ ಈ ಮೂರು ರೀತಿಯಲ್ಲಿ ಪ್ರಕರಣ ದಾಖಲಿಸಲಾಗುವುದು ಎಂದು ಎಸ್‌ಪಿ ರಂಜಿತ್ ಕುಮಾರ್ ಬಂಡಾರು ಅವರು ತಿಳಿಸಿದರು.

ತುರ್ತು ಸೇವೆಗಳಿಗೆ 112 ಗೆ ಕರೆಮಾಡಿ:

ಸಾರ್ವಜನಿಕರು ಯಾವುದೇ ದೌರ್ಜನ್ಯ, ಗಲಾಟೆ, ಹಲ್ಲೆ, ದೊಂಬಿ, ಕಳ್ಳತನ, ರಸ್ತೆ ಅಪಘಾತ ಹಾಗೂ ಇತರೆ ತುರ್ತು ಸೇವೆಗಳಿಗೆ 112 (ಇಆರ್‌ಎಸ್‌ಎಸ್) ಸಂಖ್ಯೆಗೆ ಕರೆ ಮಾಡಿದರೆ ಪೊಲೀಸ್ ಸೇವೆ ಪಡೆಯಬಹುದಾಗಿದೆ. 24*7 ತುರ್ತು ಪ್ರತಿಕ್ರಿಯೆ ಸೇವೆ ಲಭ್ಯವಿದ್ದು, ದೂರುದಾರರು ಕರೆ ಮಾಡಿದ 15 ನಿಮಿಷಗಳೊಳಗಾಗಿ ಘಟನಾ ಸ್ಥಳಕ್ಕೆ ಆಗಮಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಸಹಕಾರಿಯಾಗಲಿದೆ. ಇದರಿಂದ ಸಾರ್ವಜನಿಕರು ಪೊಲೀಸ್ ಠಾಣೆಗಳಿಗೆ ಬರುವ ಅವಶ್ಯಕತೆ ಇರುವುದಿಲ್ಲ ಎಂದು ಎಸ್ಪಿ ಅವರು ಹೇಳಿದರು.

ಸಂಚಾರಿ ಪೊಲೀಸ್ ಠಾಣೆಯ ಪಿಐ ಅಯ್ಯನಗೌಡ ಪಾಟೀಲ್ ಅವರು ಸ್ಪೀಡ್ ಲೇಸರ್ ಗನ್, ಬ್ರೀಥ್ ಅಲ್ಕೋಹಾಲ್ ಅನಲೈಜರ್ ಉಪಕರಣಗಳ ಬಗ್ಗೆ ಪ್ರಾತ್ಯಕ್ಷಿಕೆ ತೋರಿಸಿಕೊಟ್ಟರು.

ಈ ವೇಳೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಡಿಎಆರ್‌ನ ಡಿಎಸ್‌ಪಿ ಬಿ. ತಿಪ್ಪೇಸ್ವಾಮಿ ಸೇರಿದಂತೆ ಪೊಲೀಸ್ ಅಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿದ್ದರು.

# ಕೃಷಿ ಇಲಾಖೆ: ಬೆಳೆ ವಿಮೆ ನೋಂದಣಿಗೆ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕೃಷಿ ಇಲಾಖೆ ವತಿಯಿಂದ 2024–25ನೇ ಸಾಲಿನ ಮುಂಗಾರು ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಕೃಷಿ ಬೆಳೆಗಳ ವಿಮೆ ನೋಂದಣಿಗೆ ನೋಂದಾಯಿಸಿಕೊಳ್ಳಬಹುದು ಎಂದು ಸಹಾಯಕ ಕೃಷಿ ನಿರ್ದೇಶಕ ದಯಾನಂದ ಅವರು ತಿಳಿಸಿದ್ದಾರೆ.

ರೈತರು ಮುಸುಕಿನ ಜೋಳ, ಜೋಳ, ಸೂರ್ಯಕಾಂತಿ, ಕಡಲೆ, ಕುಸುಬೆ ಮುಂತಾದ ಬೆಳೆಗಳಿಗೆ ರೈತರು ಬೆಳೆ ವಿಮೆ ಮಾಡಿಸಿಕೊಳ್ಳಬಹುದು. ರೈತರಿಗೆ ನೈಸರ್ಗಿಕ ಪ್ರಕೃತಿ ವಿಕೋಪಗಳಿಂದಾಗಿ ಬೆಳೆ ಹಾನಿಯಾದರೆ, ವಿಮಾ ಯೋಜನೆಯಿಂದ ಬಹಳಷ್ಟು ಅನುಕೂಲವಾಗಲಿದೆ.ಬೆಳೆ ವಿಮೆ ನೋಂದಣಿಗಾಗಿ ಹತ್ತಿರದ ಸಾಮಾನ್ಯ ಸೇವಾ ಕೇಂದ್ರ ಅಥವಾ ತಮ್ಮ ವ್ಯವಹಾರದ ಬ್ಯಾಂಕ್‌ಗಳಿಗೆ ಭೇಟಿ ನೀಡಿ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ ಮತ್ತು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ವಿಮಾ ಸಂಸ್ಥೆಯ ತಾಲೂಕು ಪ್ರತಿನಿಧಿಗೆ (8277472721) ಕರೆ ಮಾಡಿ ಮಾಹಿತಿ ಪಡೆಯಬಹುದು.

# ಜೂ.27ಕ್ಕೆ ನಿವೃತ್ತ ಪಿಂಚಣಿದಾರರಿಗಾಗಿ ಪಿಂಚಣಿ ಅದಾಲತ್ ಆಯೋಜನೆ

**ಹಂಪಿ ಟೈಮ್ಸ್ ಬಳ್ಳಾರಿ**

ಅಂಚೆ ಇಲಾಖೆಯಿಂದ ನಿವೃತ್ತರಾದ ಸರ್ಕಾರದಿಂದ ಪಿಂಚಣಿ ಪಡೆಯುತ್ತಿರುವ ಇಲಾಖಾ ನೌಕರರಿಗಾಗಿ ಮತ್ತು ಕುಟುಂಬ ಪಿಂಚಣಿ ಪಡೆಯುತ್ತಿರುವ ನಿವೃತ್ತ ಅಂಚೆ ನೌಕರರ ಕುಟುಂಬದವರಿಗಾಗಿ ಜೂ.27 ರಂದು ಸಂಜೆ 4 ಗಂಟೆಗೆ ಬಳ್ಳಾರಿ ವಿಭಾಗೀಯ ಅಂಚೆ ಕಚೇರಿಯಲ್ಲಿ ಪಿಂಚಣಿ ಅದಾಲತ್ ಆಯೋಜಿಸಲಾಗಿದೆ. ಪಿಂಚಣಿದಾರರು ತಮ್ಮ ಕುಂದು–ಕೊರತೆಗಳಿದ್ದರೆ ಅಂಚೆ ಅಧೀಕ್ಷಕರು, ಬಳ್ಳಾರಿ ವಿಭಾಗ, ವಿಭಾಗೀಯ ಕಾರ್ಯಾಲಯ ಕೋಟೆ, ಬಳ್ಳಾರಿ, ಅವರಿಗೆ ಜೂ.27 ರ ಮುಂಚಿತವಾಗಿ ತಲುಪುವಂತೆ ಪತ್ರ ಮುಖೇನ ಅಥವಾ doballari.ka@indiapost.gov.in ಗೆ ಇ–ಮೇಲ್ ಮುಖಾಂತರ ಕಳುಹಿಸಿಕೊಡಬಹುದು ಅಥವಾ ತಮ್ಮ ಅಹವಾಲುನೊಂದಿಗೆ ಜೂ.27 ರಂದು ನಡೆಯುವ ಪಿಂಚಣಿ ಅದಾಲತ್‌ನಲ್ಲಿ ಭಾಗವಹಿಸಬಹುದು. ಅದಾಲತ್‌ನಲ್ಲಿ ಭಾಗವಹಿಸುವವರಿಗೆ ಯಾವುದೇ ತರಹದ ಭತ್ಯೆ ನೀಡಲಾಗುವುದಿಲ್ಲ ಎಂದು ಬಳ್ಳಾರಿ ವಿಭಾಗ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA